

No.MAG(3)/NPP/98/2023-2024

ಸ್ಥಾಪನೆ : ೧೯೭೯

No.MAG(3)/NPP/99/2023-2024



# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು-೧೦೭

ಸಂಪುಟ: ೧೨ ಸಂಚಿಕೆ: ೭ | ಅಕ್ಟೋಬರ್ ೨೦೨೪ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ಕ್ರೋಧಿ ಸಂವತ್ಸರ
Volume: 12 Issue: 7 | October 2024 | Pages-8 | Annual Subscription Rs.20/- | ಶ್ರಾವಣ-ಆಶ್ವೀಜ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜೆ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

ದಿ। ಪ್ರೊ. ಎಂ.ವಿ. ಸೀತಾರಾಮಯ್ಯ
ಸಂಸ್ಥಾಪಕರು
ಡಾ. ಪಿ.ವಿ. ನಾರಾಯಣ
ಗೌರವಾಧ್ಯಕ್ಷರು

**ಪದಾಧಿಕಾರಿಗಳು**

- ಅಧ್ಯಕ್ಷ
  ಡಾ. ಬೈರಮಂಗಲ ರಾಮೇಗೌಡ
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  ಡಾ. ಶಾಂತರಾಜು
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  ಡಾ. ಬೆಳವಾಡಿ ಕೃ. ಪ್ರಭಾಕರ
  ೯೪೪೯೪೪೮೯೧೦

**ಸಂಯೋಜನಾಧಿಕಾರಿಗಳು**

ಶ್ರೀ ಬಿ.ಎಸ್. ಗುರುಪ್ರಸಾದ್
ಹಸ್ತಪ್ರತಿ ವಿಭಾಗ
ಡಾ. ಚಿತ್ತಯ್ಯ ಪೂಜಾರ್
ಎಂ.ವಿ.ಸೀ. ಸಂಶೋಧನಾ ಕೇಂದ್ರ

## ಸಂನುಡಿ

## ಬದಲಾವಣೆಯೇ ಪ್ರಕೃತಿಯ ನಿಯಮ

ಸಾಹಿತಿಗಳು/ಸಂಶೋಧಕರು ತಮ್ಮ ಕೃತಿಗಳನ್ನು ಪ್ರಕಟಿಸಲು ಅನೇಕ ವರ್ಷಗಳಿಂದ ಮುದ್ರಣ ಮಾಧ್ಯಮ / ಸಾಧನಗಳ ಮೇಲೇ ಅವಲಂಬಿತರಾಗಿದ್ದರು. ಪ್ರಕಾಶಕರ ಮೂಲಕವೋ, ತಾವೇ ಪ್ರಕಾಶಕರಾಗಿಯೋ, ವೃತ್ತಪತ್ರಿಕೆಗಳ ಮೂಲಕವೋ, ಒಂದು ವೇಳೆ ವಿದ್ವತ್ ಲೇಖನಗಳಿದ್ದರೆ ಅದಕ್ಕೆ ಸಂಬಂಧಪಟ್ಟ ಮಾನ್ಯತೆ ಪಡೆದ ಜರ್ನಲ್ಗಳ ಮೂಲಕವೋ ಈ ಪ್ರಕಟಣಾ ಕ್ರಿಯೆ ನಡೆಯುತ್ತಿತ್ತು.

ಆದರೀಗ ಈ ಪ್ರಕ್ರಿಯೆಯಲ್ಲಿ ಬದಲಾವಣೆಯನ್ನು ಕಾಣುತ್ತಿದ್ದೇವೆ. e-ಯುಗ ಸರ್ವ ಆಯಾಮಗಳಲ್ಲೂ ತನ್ನ ಬೇರುಗಳನ್ನು ಪಸರಿಸಿದೆ. ಲೇಖಕರು ಇದಕ್ಕೆ ಹೊಂದಿಕೊಳ್ಳದೇ ಅನ್ಯಮಾರ್ಗವಿಲ್ಲದಂತಾಗಿದೆ. ನವಪೀಳಿಗೆಗೆ ಇದಕ್ಕೆ ಹೊಂದಿಕೊಳ್ಳುವುದು ಸುಲಭವಷ್ಟೇ ಅಲ್ಲ, ಅವರು ಇದನ್ನು ಖುಷಿಯಿಂದ ಆಹ್ವಾನಿಸಿ ಆಸ್ವಾದಿಸುತ್ತಾರೆ, ಆರಾಧಿಸುತ್ತಾರೆ ಕೂಡ. ಹಳಬರಿಗೆ ಕಸಿವಿಸಿಯಾಗಿರುವುದು ನಿಜ, ಜೊತೆಗೆ ಮುಜುಗರವೂ. ಅವರಿಗೆ ಕೈಯಲ್ಲಿ ಹಾಳೆಗಳನ್ನು ತಿರುವುತ್ತಾ ಓದಿದರೆ ಸಂತಸ. ಬಹುಶಃ ಆಧುನಿಕ ಡಿಜಟಲೀಕೃತ ಸಾಧನಗಳನ್ನು ಬಳಸಲು ಇರುವ ಇರುಸು ಮುರುಸು ಸಕಾರಣವಿರಬಹುದು.

ಇತ್ತೀಚಿನ ವರದಿಗಳ ಪ್ರಕಾರ, ಪ್ರಕಟಣಾ ಕ್ಷೇತ್ರಕ್ಕೆ ಉಂಟಾಗುತ್ತಿರುವ ತೊಂದರೆಗಳ ಆಧಾರದ ಮೇಲೆ ಆಧುನಿಕ ವಿಧಾನಗಳಿಗೆ ಒಲವು ತೋರಿಸಲು ಸಂಪಾದಕರು ಉತ್ಸುಕರಾಗಿದ್ದಾರೆ. ದಿನೇ ದಿನೇ ಅವರು ಕಳಿಸುವ ಲೇಖನಗಳ ಸಂಖ್ಯೆ, ಪತ್ರಿಕೆಗಳ ಸಂಪಾದಕರ ಮೇಜಿನ ಮೇಲೆ ಗೋಪುರಾಕಾರದಲ್ಲಿ ಶೇಖರವಾಗುತ್ತಿದ್ದು, ಅವನ್ನೆಲ್ಲಾ ಓದುವ, ಪರಿಶೀಲಿಸುವ, ಸಂಪಾದಿಸುವ ಶ್ರಮದ ಒತ್ತಡ ಹೆಚ್ಚಾಗುತ್ತಿರುವುದು ಒಂದು ಕಡೆ. ಪ್ರಕಟಣೆಗೆ ಸೂಕ್ತವೆನಿಸಿದ ಕೃತಿಗಳ ಸಂಖ್ಯೆಯೂ ಹೆಚ್ಚಾದಂತೆ, ಅವುಗಳು ಪ್ರಕಟವಾಗುವ ಕಾಲಮಿತಿಯೂ ಹೆಚ್ಚಾಗಿ, ಅವು ಪ್ರಕಟವಾಗುವ ವೇಳೆಗೆ ಅದರ ಉದ್ದೇಶವೋ, ಅದರ ಮುಖ್ಯ ಅಂಶಗಳೋ ಅಪ್ರಸ್ತುತ ಆಗುತ್ತಿರುವುದು ಇನ್ನೊಂದು ಕಡೆ.

e-ಯುಗದಲ್ಲಿ ಸಂಪಾದಕರಿಗೆ ಅನುಕೂಲವಾಗುವ ಅನೇಕ ಅಂಶಗಳು ಅಡಕವಾಗಿವೆ. ಸ್ವಯಂಚಾಲಿತ ವ್ಯಾಕರಣಗಳನ್ನು ತಿದ್ದುವ ಸಾಧನಗಳು, ಕೃತಿಚೌರ್ಯವನ್ನು ಕಂಡುಹಿಡಿಯುವ ಪರಿಕರಗಳು, ಭಾವಾರ್ಥಗಳನ್ನು ಮಾಡುವ ಅನುಕೂಲ, ಅನುವಾದಿಸುವ ಸುಲಭೋಪಾಯಗಳು, ಜೊತೆಗೆ ಮೆಮೊರಿ ಚಿಪ್ ಇರುವುದರಿಂದ ಸ್ಥಳದ ಉಳಿತಾಯ, ಮುದ್ರಿಸಿದೇ ತಿದ್ದುಪಡಿ ಮಾಡಲು ಅವಕಾಶ, e-ಮಾಧ್ಯಮದ ಮೂಲಕ ಮುದ್ರಣ, ಸೂಕ್ತ ವ್ಯಕ್ತಿಗಳಿಗೆ ರವಾನೆ ಹೀಗೆ ಅನೇಕ ಸವಲತ್ತುಗಳು.

ವಿದ್ವತ್ ಜರ್ನಲ್ಗಳಲ್ಲೂ ಬಂದ ಲೇಖನಗಳನ್ನು ಸುಲಭವಾಗಿ ಪರಿಣಿತ ವಿಷಯತಜ್ಞರಿಗೆ ಕಳಿಸಿ ಅಭಿಪ್ರಾಯ ಪಡೆಯುವ ಕ್ರಿಯೆ, ಮಾರ್ಪಡಿಸಲು ಸೌಲಭ್ಯ ಇವೆಲ್ಲಾ ಸಂಪಾದಕರ ಕಾರ್ಯವನ್ನು ಸ್ವಲ್ಪವಾದರೂ ಹಗುರಗೊಳಿಸಿರುವುದರಿಂದ ಇತ್ತೀಚಿಗೆ e-ಯುಗವೇ ಉತ್ತಮ ದಿಕ್ಕಿನತ್ತ ಸಾಗುತ್ತಿದೆ ಎಂದು ಭಾವಿಸಲಾಗಿದೆ.

ಇನ್ನೊಂದೆಡೆ, ಲೇಖಕರಿಗೂ ಅನುಕೂಲ ಪರಿಸರ ನಿರ್ಮಾಣವಾಗಿದೆ ಎನ್ನಬಹುದು. ಹಿಂದೆ ಕನಿಷ್ಟ ಸಾವಿರ ಪ್ರತಿಗಳನ್ನು ಮುದ್ರಿಸಿ, ಮಾರಾಟ ಮಾಡುವ ಜೊತೆಗೆ ವೆಚ್ಚದ ಭಾರವೂ ಇರುತ್ತಿತ್ತು. ಅವರ ಲೇಖನಗಳು ಅನೇಕ ಸಂದರ್ಭಗಳಲ್ಲಿ ಸ್ಥಳೀಯರು ಮಾತ್ರ ಓದಲು ಸಾಧ್ಯವಿತ್ತು. ಆದರೆ ಈಗ ಅನೇಕ ಮುದ್ರಕರು, ಲೇಖನಗಳನ್ನು ಪಡೆದು, ಪ್ರಿಂಟ್ ಆನ್ ಡಿಮ್ಯಾಂಡ್ ಸೂತ್ರದಂತೆ ಕೇವಲ ಕೆಲವೇ ಪ್ರತಿಗಳನ್ನು ಮುದ್ರಿಸಿ, ನಂತರ ಬೇಡಿಕೆ ಬಂದಂತೆ ಮುದ್ರಿಸಿ ಮಾರುವ ಪ್ರಕ್ರಿಯೆ ಪ್ರಾರಂಭಿಸಿ, ಹೊಸ ಆಯಾಮವನ್ನೇ ನಿರ್ಮಿಸಿದ್ದಾರೆ. ಇದರ ಜೊತೆಗೆ, ಪ್ರಕಟಣೆಗೆ ಕಳಿಸಿ ವರ್ಷಗಟ್ಟಲೆ ಕಾಯುವ ಬದಲು ಲೇಖಕರೇ ಸ್ವತಃ blog. podcast, youtube ಮಾಧ್ಯಮಗಳ ಮೂಲಕ ತಾವೇ ಪ್ರಕಟಿಸಿ ಪ್ರಪಂಚದಾದ್ಯಂತ ತಮ್ಮ ಲೇಖನಗಳನ್ನು ಆಸಕ್ತರು ಓದುವಂತೆ ಮಾಡಿ ಓದುಗರಿಂದ ವಿಮರ್ಶೆ, ಸಲಹೆ, ಅಭಿಪ್ರಾಯಗಳನ್ನೂ ಪಡೆಯಬಹುದು.

ಈ ಪರಿವರ್ತನೆಗೆ ನಾವು ಹೇಗೆ ಮತ್ತು ಎಷ್ಟು ಬೇಗ ಹೊಂದುಕೊಳ್ಳುತ್ತೇವೆಯೋ ಎಂದು ಕಾದು ನೋಡುವವಷ್ಟರಲ್ಲಿ, ಈ ಪದ್ಧತಿ ಪರಿವರ್ತನೆಯಾದರೂ ಅಚ್ಚರಿಯೇನಿಲ್ಲ. ಬದಲಾವಣೆಯೇ ಪ್ರಕೃತಿಯ ನಿಯಮ.

**ಡಾ. ಬೆಳವಾಡಿ ಕೃ. ಪ್ರಭಾಕರ್**
ಸಂಪಾದಕರು

# ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಕಾರ್ಯಕ್ರಮಗಳು

## ಶ್ರೀಮತಿ ಸಾವಿತ್ರಮ್ಮ
## ಪ್ರೊ. ಎಂ.ವಿ. ಸೀತಾರಾಮಯ್ಯ ದತ್ತಿ ಪ್ರಶಸ್ತಿ



ಸೆಪ್ಟೆಂಬರ್ ತಿಂಗಳೆಂದರೆ ವಿಶೇಷ. ಈ ಮಾಹೆಯ ೯ನೇ ತಾರೀಖು ಪ್ರತಿಷ್ಠಾನದ ಸಂಸ್ಥಾಪಕರ ದಿನವೆಂದು ಆಚರಿಸಲಾಗುತ್ತದೆ. ಇದು ಪ್ರೊ. ಎಂ.ವಿ. ಸೀತಾರಾಮಯ್ಯನವರ ಜನ್ಮದಿನ ಕೂಡ.

ಇಂದಿನ ಕಾರ್ಯಕ್ರಮದಲ್ಲಿ 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ' ಇವರ ಹೆಸರಿನಲ್ಲಿ ಸ್ಥಾಪಿಸಲಾದ ದತ್ತಿಯ ಅಡಿಯಲ್ಲಿ ಖ್ಯಾತ ಹಿರಿಯ ವಿದ್ವಾಂಸ, ಸಂಶೋಧಕ ಮತ್ತು ನಿಘಂಟು ತಜ್ಞ, ಡಾ. ಎ.ವಿ. ನಾವಡ ಅವರಿಗೆ ಮೇಲಿನ ಸಾಹಿತ್ಯ ಪುರಸ್ಕಾರವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನವು ನೀಡಿ ಗೌರವಿಸಿತು. ಅಭಿನಂದನಾ ಪತ್ರ, ಫಲಕದ ಜೊತೆಗೆ ಮೂವತ್ತು ಸಾವಿರ ರೂಪಾಯಿಗಳ ನಗದನ್ನು ನೀಡಲಾಯಿತು. ಪ್ರಶಸ್ತಿ ಪ್ರದಾನ ಮಾಡಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿದ್ದ ಶಾಸ್ತ್ರ ಚೂಡಾಮಣಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ.ಬೈರಮಂಗಲ ರಾಮೇಗೌಡ ವಹಿಸಿದ್ದರು. ಗೌರವಾಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರು ವಿಶೇಷ ಅತಿಥಿಯಾಗಿ ವೇದಿಕೆಯನ್ನು ಅಲಂಕರಿಸಿದ್ದರು.

ಕಾರ್ಯಕ್ರಮದ ನಿರೂಪಣಾ ಜವಾಬ್ದಾರಿಯನ್ನು 'ಲೋಚನ' ಷಾಣ್ಮಾಸಿಕದ ಸಂಪಾದಕರಾದ ಡಾ.ಚಂದ್ರಶೇಖರ ನಾದೂರು ವಹಿಸಿದ್ದರು.

ವಿದುಷಿ ಶ್ರೀಮತಿ ಸುಮಲತಾ ಅವರ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ನಂತರ ಪ್ರೊ. ಎಂ.ವಿ.ಸೀ. ದಂಪತಿಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

### ಸ್ವಾಗತ ಭಾಷಣ

ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಮುಖ್ಯ ಅತಿಥಿಗಳು, ಗೌರವಾಧ್ಯಕ್ಷರು, ಪ್ರಶಸ್ತಿ ಪುರಸ್ಕೃತರು, ಅಧ್ಯಕ್ಷರು, ಎಂ.ವಿ.ಸೀ. ಇವರ ಕುಟುಂಬದ ಸದಸ್ಯರು, ಪುರಸ್ಕೃತರ ಶಿಷ್ಯವೃಂದ ಹಾಗೂ ಆಹ್ವಾನಿತರನ್ನಲ್ಲದೇ, ಅಂತರ್ಜಾಲದ ಶ್ರೋತೃಗಳಿಗೂ, ಸಭೆಗೆ ಬಂದಿದ್ದ ಮಾಧ್ಯಮ ಸ್ನೇಹಿತರಿಗೂ ಸ್ವಾಗತ ಕೋರಿದರು. ಹಾಗೇ, ಮುಖ್ಯ ಅತಿಥಿಗಳಾದ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಡಾ. ಪಿ.ವಿ. ನಾರಾಯಣ ಮತ್ತು ಅಧ್ಯಕ್ಷತೆ ವಹಿಸಿದ್ದ ಡಾ.ಬೈರಮಂಗಲ ರಾಮೇಗೌಡ ಅವರನ್ನು ಸಭೆಗೆ ಪರಿಚಯಿಸಿದರು.

### ದತ್ತಿಯ ವಿಹಂಗಮ ನೋಟ

ಹಸ್ತಪ್ರತಿ ಸಂಯೋಜಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ದತ್ತಿಯ ಧ್ಯೇಯೋದ್ದೇಶಗಳನ್ನು ಮತ್ತು ಪ್ರಾರಂಭದಿಂದ ಇಲ್ಲಿಯವರೆಗೆ ನಡೆದ ಅದರ ವಿದ್ಯಮಾನಗಳನ್ನು ಪರಿಚಯ ಮಾಡಿಸಿದರು. ದತ್ತಿ ಪ್ರಾರಂಭವಾದ ೨೦೦೬ನೇ ಇಸವಿಯಿಂದ ಇಲ್ಲಿಯವರೆಗೆ ಸೃಜನ ಸಾಹಿತ್ಯ, ಸಂಶೋಧನೆ, ನಾಡು–ನುಡಿ ಸಂಘಟನೆ ಹೀಗೆ ವಿವಿಧ ಕ್ಷೇತ್ರಗಳ ವಿದ್ವಾಂಸರನ್ನು ಗುರುತಿಸಿ ಹತ್ತೊಂಬತ್ತು ಖ್ಯಾತ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಿದ ವಿಷಯವನ್ನು ಸಭಿಕರ ಕರತಾಡನದ ಮಧ್ಯೆ ಹೆಮ್ಮೆಯಿಂದ ತಿಳಿಸಿದರು.

### 'ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ'ದ ನೋಟ

ರಾಘವ, ಮೈ.ವೆಂ.ಸೀ. ಕಾವ್ಯನಾಮಗಳಿಂದ ಪ್ರಸಿದ್ಧರಾಗಿದ್ದ ಪ್ರೊ. ಎಂ.ವಿ. ಸೀತಾರಾಮಯ್ಯನವರು ಹೊಸಗನ್ನಡದ ವಿದ್ವಾಂಸರು, ಸಂಶೋಧಕರು, ಕವಿ, ಕಾದಂಬರಿಕಾರರು ಮತ್ತು ವಿಮರ್ಶಕರು. ಕನ್ನಡ ಕಟ್ಟಲು ಶ್ರಮಿಸಿದ ಬಿ.ಎಂ.ಶ್ರೀಕಂಠಯ್ಯನವರಂತಹ ಮಹಾಗುರುಗಳಿಗೆ ಶಿಷ್ಯರಾಗಿ ಸಲ್ಲಿಸಿದ ಬಹುದೊಡ್ಡ ಕಾಣಿಕೆಯೇ ಬಿ.ಎಂ.ಶ್ರೀ. ಪ್ರತಿಷ್ಠಾನದ ಸ್ಥಾಪನೆ. ಚಿತ್ರಕಲೆಯಲ್ಲೂ, ಅಭಿನಯ ಕಲೆಯಲ್ಲೂ ಅವರಿಗೆ ಅಪಾರವಾದ ಆಸಕ್ತಿಯಿತ್ತು. ಎಂ.ವಿ.ಸೀ. ರಚಿಸಿದ ಸಾಹಿತ್ಯ ವಿಪುಲವೂ, ವೈವಿಧ್ಯಮಯವೂ ಆದದ್ದು. ಜೀವಮಾನಪರ್ಯಂತ ಹಲವು ಬಗೆಯ ದೈಹಿಕ ತೊಂದರೆಗಳನ್ನು ಅನುಭವಿಸಿದರೂ, ಅವರು ಮಾಡಿದ ಕನ್ನಡ ಕಾಯಕ ಬೆರಗುಗೊಳಿಸುವಂಥದ್ದು. ಪ್ರೊ. ಎಂ.ವಿ.ಸೀ. ಅವರ ಜನ್ಮಶತಾಬ್ದಿ ವರ್ಷವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನವು ಹಸ್ತಪ್ರತಿ ಶಾಸ್ತ್ರದ ವರ್ಷವನ್ನಾಗಿ ಆಚರಿಸಿತು. ಎಂ.ವಿ.ಸೀ.ಅವರ ಸಹಧರ್ಮಿಣಿ ಶ್ರೀಮತಿ ಸಾವಿತ್ರಮ್ಮನವರು. ಈ ದಂಪತಿಗಳ ಮಕ್ಕಳಾದ ಎಂ.ಎಸ್. ಭಾಸ್ಕರ್, ಎಂ.ಎಸ್. ರಾಮಪ್ರಸಾದ್, ಎಸ್.ಟಿ. ರಾಧಾಕೃಷ್ಣ ಮತ್ತು ಎಂ.ಎಸ್. ಶೇಷಾದ್ರಿನಾಥ್ ಅವರು 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ'ವನ್ನು ಪ್ರತಿವರ್ಷ ಸರದಿಯಂತೆ ಸಾಹಿತ್ಯ, ಸಂಶೋಧನೆ, ನಾಡು ನುಡಿ ಸಂಘಟನೆ ಕ್ಷೇತ್ರಗಳ ಸಾಧಕರಿಗೆ ನೀಡಲು ಏಳು ಲಕ್ಷ ನಲವತ್ತಾರು ಸಾವಿರ ರೂಪಾಯಿಗಳ ದತ್ತಿಯನ್ನು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಸ್ಥಾಪಿಸಿದ್ದಾರೆ. ಪುರಸ್ಕಾರಕ್ಕೆ ಆಯ್ಕೆಯಾದವರನ್ನು ಮೂವತ್ತು ಸಾವಿರ ರೂಪಾಯಿಗಳ ನಗದು, ಫಲಕ ಮತ್ತು ಅಭಿನಂದನ ಪತ್ರ ನೀಡಿ ಗೌರವಿಸಲಾಗುವುದು.

ಈ ಬಾರಿ ಪ್ರಶಸ್ತಿಗೆ ಭಾಜನರಾಗಿರುವ ಸಂಶೋಧನ ಲೋಕದ ದೈತ್ಯ ಪ್ರತಿಭೆ ಪ್ರೊ. ಎ.ವಿ. ನಾವಡ ಅವರನ್ನು ಗೌರವ ಸ್ವೀಕರಿಸಲು ಆಹ್ವಾನಿಸಲಾಗಿದೆ.

ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ಗೋಪಾಲಕೃಷ್ಣ, ಪ್ರೊ. ಎ.ವಿ. ನಾವಡ ಅವರಿಗೆ ನೀಡುವ ಅಭಿನಂದನಾ ಪತ್ರವನ್ನು ಓದಿದರು.

### ಪ್ರಶಸ್ತಿ ಪುರಸ್ಕೃತ ಸಂಶೋಧಕ ಪ್ರೊ. ಎ.ವಿ. ನಾವಡ

ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎ.ವಿ. ನಾವಡ ಕನ್ನಡದ ಹಿರಿಯ ವಿದ್ವಾಂಸರು ಮತ್ತು ನಿಘಂಟು ತಜ್ಞರು. ಹುಟ್ಟೂರು ಮಂಗಳೂರು ಸಮೀಪದ ಕೋಟೆಕಾರು. ಮಂಗಳೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಎಂ.ಎ. ಪದವಿ. ಕುಂದಾಪುರದ ಭಂಡಾರಕರ್ಸ್ ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭ. ಕರ್ನಾಟಕ ಸರ್ಕಾರದ ತುಳು ನಿಘಂಟು ಯೋಜನೆಯ ಸಹಾಯಕ ಸಂಪಾದಕರಾಗಿ ಕಾರ್ಯ ನಿರ್ವಹಣೆ. ಹಂಪಿ ವಿಶ್ವವಿದ್ಯಾಲಯದಲ್ಲಿ ಹಸ್ತಪ್ರತಿ ಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಸ್ಥಾಪಕಾಧ್ಯಕ್ಷ. ಭಾಷಾ ನಿಕಾಯದ ಡೀನ್,

ಪ್ರಸಾರಾಂಗದ ನಿರ್ದೇಶಕ, ೬೦೦ಕ್ಕೂ ಹೆಚ್ಚು ಗ್ರಂಥಗಳ ಪ್ರಕಟಣೆಯ ದಾಖಲೆ. ರಾಜ್ಯಮಟ್ಟದಲ್ಲಿ ನಾಲ್ಕು ದಾಸಸಾಹಿತ್ಯ ಸಮ್ಮೇಳನಗಳು ಹಾಗೂ ಪಂಡರಪುರದಲ್ಲಿ ದಾಸ – ಸಂತ ಸಾಹಿತ್ಯ ರಾಷ್ಟ್ರೀಯ ಸಮ್ಮೇಳನದ ಸಂಘಟನೆ. ಮಂಗಳೂರಿನ ಕರ್ನಾಟಕ ತಿಯೊಲಾಜಿಕಲ್ ಸಂಶೋಧನ ಸಂಸ್ಥೆಯ ನಿರ್ದೇಶಕ.

ಕನ್ನಡ, ತುಳು ಎರಡೂ ಭಾಷೆಗಳಲ್ಲಿ ಪರಿಣತಿ. ೮೫ಕ್ಕೂ ಹೆಚ್ಚು ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಭಾಷೆ, ಜಾನಪದ, ದಾಸಸಾಹಿತ್ಯ, ಮಿಷಿನರಿ ಸಾಹಿತ್ಯ ಕೃತಿಗಳ ಪ್ರಕಟಣೆ. ಕನಕ ಕಾವ್ಯ ಸಂಪುಟ, ಶ್ರೀ ವಾದಿರಾಜರ ಸಮಗ್ರ ಕನ್ನಡ ರಚನೆಗಳು, ಪೇಜಾವರ ಸದಾಶಿವರಾವ್ ಸಮಗ್ರ ಸಂಪುಟ, ಕಿಟೆಲ್ ವಾಚಿಕೆ, ಮಿಷನರಿಗಳ ಕನ್ನಡ ವೃತ್ತಾಂತವು, ಗೋವಿಂದ ಪೈ ನಿಘಂಟು, ವಿವಕ್ಷೆ, ಸಾಹಿತ್ಯ ಶೋಧ, ಜಾನಪದ ಶೋಧ, ಜಾನಪದ ಕೈಪಿಡಿ, ತುಳುವ ದರ್ಶನ ಇವು ನಾವಡರ ವಿದ್ವತ್ಪೂರ್ಣ ಕೃತಿಗಳಲ್ಲಿ ಕೆಲವು.

ಕರ್ನಾಟಕ ಜಾನಪದ ಅಕಾಡೆಮಿಯ ತಜ್ಞ ಪ್ರಶಸ್ತಿ, ಕರ್ನಾಟಕ ಸರ್ಕಾರದ 'ಕನಕಶ್ರೀ' ಮತ್ತು 'ಕನಕ ಗೌರವ' ಮುಂತಾದ ಪ್ರಶಸ್ತಿ, ಪುರಸ್ಕಾರ, ಗೌರವಗಳಿಗೆ ಪಾತ್ರರಾಗಿರುವ ಪ್ರೊ. ಎ.ವಿ.ನಾವಿಡ ಅವರಿಗೆ ಈಗ ಬಿ.ಎಂ.ಶ್ರೀ. ಪ್ರತಿಷ್ಠಾನದ 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ'ದ ಗೌರವ ನೀಡಲಾಗುತ್ತಿದೆ.

**ಪ್ರಶಸ್ತಿ ಪುರಸ್ಕಾರ**

ಸಂಶೋಧಕ ಪ್ರೊ. ಎ.ವಿ. ನಾವಡ ಅವರಿಗೆ ಮುಖ್ಯ ಅತಿಥಿಗಳಾದ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಗೌರವಾಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಮತ್ತು ಡಾ. ಬೈರಮಂಗಲ ರಾಮೇಗೌಡ ಅವರುಗಳು ಶಾಲು ಹೊದಿಸಿ, ಅಭಿನಂದನಾ ಪತ್ರ, 'ಸಾವಿತ್ರಮ್ಮ – ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ'ದ ನೆನಪಿನ ಫಲಕ ಮತ್ತು ಮೂವತ್ತು ಸಾವಿರ ರೂಪಾಯಿಗಳ ಚೆಕ್ಕನ್ನು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಡಾ. ಶಾಂತರಾಜು, ಡಾ. ಚಂದ್ರಶೇಖರ ನಾದೂರು ಸಹ ಉಪಸ್ಥಿತರಿದ್ದರು.

**ಮುಖ್ಯ ಅತಿಥಿಗಳ ಅಭಿನಂದನಾ ನುಡಿಗಳು**

ಪ್ರೊ. ನಾವಡ ಅವರಿಗೆ ಪ್ರಶಸ್ತಿ ನೀಡಿದ ನಂತರ ಮಾತನಾಡುತ್ತಾ, ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಪುರಸ್ಕೃತರನ್ನು ಮತ್ತು ಅವರ ಕನ್ನಡ ಪಾಂಡಿತ್ಯವನ್ನು ಚೆನ್ನಾಗಿ ಬಲ್ಲೆ. ಪ್ರೊ. ನಾವಡ ಅವರು ಒಬ್ಬ ಸಜ್ಜನರು. ಅವರೊಬ್ಬ ಅಧ್ವರ್ಯರು. ದಣಿವರಿಯದ ದೈತ್ಯ ಕೆಲಸಗಾರ. ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೂ ಶ್ರಮವಹಿಸಿ ಛಲಗಾರನಂತೆ ಅದನ್ನು ಸಂಪೂರ್ಣಗೊಳಿಸದೇ ಕೈಬಿಟ್ಟವರಲ್ಲ. ಅವರ ಕಾರ್ಯವೈಖರಿಯ ವಿಶೇಷತೆ ಎಂದರೆ, ಆಳವಾದ ಅಧ್ಯಯನ ಮತ್ತು ಮೌಲಿಕ ವಿಚಾರ ಮಾಡದೇ ಯಾವುದೇ ಕೆಲಸ ಪ್ರಾರಂಭಿಸುತ್ತಿರಲಿಲ್ಲ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಾವು ಒಟ್ಟಿಗೆ ಕೆಲಸ ಮಾಡುತ್ತಿದ್ದಾಗ, ಪ್ರೊ.ನಾವಡ ಸಾಹಿತ್ಯ ಕ್ಷೇತ್ರಕ್ಕೆ ನೂತನ ಆವಿಷ್ಕಾರಗಳ ಸಲಹೆಯೊಂದಿಗೆ ನನ್ನ ಬಳಿ ಬರುತ್ತಿದ್ದರು. ಅವೆಲ್ಲವೂ ಗಮನಾರ್ಹ ವಿಷಯಗಳೇ ಆಗಿರುತ್ತಿದ್ದವು. ಕನ್ನಡವಲ್ಲದೇ ತುಳು ಭಾಷಾ ಲೋಕಕ್ಕೂ ಪ್ರೊ. ನಾವಡ ಸ್ತುತ್ಯ ಕಾಣಿಕೆ ಸಲ್ಲಿಸಿದ್ದಾರೆ. ಅವರಲ್ಲಿ ನಾನು ಕಂಡ ಇನ್ನೊಂದು ಅದ್ಭುತ ಗುಣವೆಂದರೆ ಅವರೆಂದೂ ಸ್ವಾರ್ಥಿಯಾಗಿರಲಿಲ್ಲ. ತಮ್ಮ ಜೊತೆಗೆ ಅನೇಕ ಉದಯೋನ್ಮುಖ ಸಾಹಿತಿಗಳನ್ನೂ ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ರಾತ್ರಿಯ ಹೊತ್ತು ಅವರು ಮಲಗುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಯಾರೇ ಆಗಲಿ ಪತ್ರಮುಖೇನ ಸಲಹೆ ಕೇಳಿದರೆ, ಅಥವಾ ತಮ್ಮ ಲೇಖನವನ್ನು ಪರಾಮರ್ಶೆಗಾಗಿ ಕಳಿಸಿದರೆ, ಅದನ್ನು ಓದಿ ಸ್ವತಃ ತಮ್ಮ ಅನಿಸಿಕೆಗಳನ್ನು ಬರೆದು ಕಳಿಸುತ್ತಿದ್ದರು. ಅವರಲ್ಲಿದ್ದ ಆ ಉತ್ಸಾಹದ ಚಿಲುಮೆ ನಿಜಕ್ಕೂ ಸೋಜಿಗ ಉಂಟುಮಾಡುತ್ತಿತ್ತು. ಸಾಹಿತ್ಯದ ಯಾವುದೇ ಕ್ಷೇತ್ರವಾಗಿರಲಿ ಪ್ರೊ.ನಾವಡ ನಗುಮುಖದಿಂದ ನಿಭಾಯಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವ ನಿಟ್ಟಿನಲ್ಲಿ ಅವರ ತನ್ಮಯತೆಯ ಗುಣಗಳನ್ನು ನಾನು ಬಹಳ ಮೆಚ್ಚಿಕೊಂಡಿದ್ದೇನೆ. ಇದನ್ನೆಲ್ಲಾ ಬಲ್ಲ ನಾನು, ಬಿ.ಎಂ.ಶ್ರೀ. ಪ್ರತಿಷ್ಠಾನದವರು ಈ ವರ್ಷದ 'ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ'ಕ್ಕೆ ಒಬ್ಬರನ್ನು ಆಯ್ಕೆ ಮಾಡಬೇಕೆಂದು ಅನೇಕ ವಿದ್ವತ್ ವ್ಯಕ್ತಿಗಳ ಪಟ್ಟಿಯನ್ನು ಕಳಿಸಿದಾಗ, ನಾನು ಆದ್ಯತೆಯ ಮೇರೆಗೆ ಆಯ್ಕೆ ಮಾಡಿದ ಮೊದಲ ಹೆಸರೇ ಪ್ರೊ.ನಾವಡ ಅವರದು. ಈ ಕೆಲಸದಲ್ಲಿ ಜೊತೆಗಿದ್ದವರು ಡಾ.ಎಚ್.ಟಿ. ಪೋತೆ. ಇಲ್ಲಿಯವರೆಗೆ ಕರ್ನಾಟಕ ಸರಕಾರ ನಾವಡ ಅವರಿಗೆ ಯಾವುದೇ ಉನ್ನತ ಪ್ರಶಸ್ತಿ ನೀಡದೇ ಇರುವುದು ಆಶ್ಚರ್ಯಕರ ಸಂಗತಿ ಎಂದರು.

ಪ್ರೊ. ನಾವಡ ಅವರ ಅಪಾರ ಸಾಹಿತ್ಯ ಸೇವೆಯಲ್ಲಿ ಅವರ ಕುಟುಂಬದ ನೆರವನ್ನು ಇಂದು ನಾವು ನೆನಪು ಮಾಡಿಕೊಳ್ಳಲೇಬೇಕು. ಪ್ರೊ. ನಾವಡ ಅವರಿಗೆ ಈ ಪ್ರಶಸ್ತಿ ನೀಡಿ ಪುರಸ್ಕರಿಸಿದ ನನಗೆ ಇಂದು ಅತೀವ ಸಂತೋಷವಾಗಿದೆ ಎನ್ನುತ್ತಾ ತಮ್ಮ ಅಭಿನಂದನಾ ನುಡಿಗಳಿಗೆ ಇತಿಶ್ರೀ ಹಾಕಿದರು.

**ಪ್ರಶಸ್ತಿ ಪುರಸ್ಕೃತರ ಮಾತು**

ಕನ್ನಡದ ಈ ಗುಡಿ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ, ಅದರಲ್ಲೂ ಇದರ ಸಂಸ್ಥಾಪಕರಾದ ಪ್ರೊ. ಎಂ.ವಿ.ಸೀ. ಅವರ ಜನ್ಮದಿನದಂದು ಈ ಪ್ರಶಸ್ತಿ ದೊರಕಿದ್ದು ನನ್ನ ಪೂರ್ವ ಜನ್ಮದ ಪುಣ್ಯ. ನಾನೇನೂ ಅಂತಹ ದೊಡ್ಡ ಕೆಲಸ ಮಾಡದಿದ್ದರೂ ಛಲದಿಂದ ಕೆಲಸ ಮಾಡಿದ್ದಕ್ಕೆ ಸಂದ ಫಲ ಎಂದು ಭಾವಿಸುತ್ತೇನೆ. ನನ್ನನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದ ಎಲ್ಲರಿಗೂ ಹೃದಯದಾಳದ ವಂದನೆಗಳು ಎನ್ನುತ್ತಾ ನಾವಡ ತಾವು ಸಾಹಿತ್ಯ ಕ್ಷೇತ್ರದಲ್ಲಿ ಇಟ್ಟ ಹೆಜ್ಜೆಗಳನ್ನು ನೆನಪಿಸಿದರು. ಆದರೆ ಇಷ್ಟೆಲ್ಲಾ ಸಾಧನೆ ಮಾಡಿ ನಿವೃತ್ತನಾದ ನನ್ನ ಅನುಭವವನ್ನು ಸ್ವಲ್ಪ ಹಂಚಿಕೊಳ್ಳುತ್ತೇನೆ. ಪ್ರೊ. ಎಂ.ವಿ.ಸೀ. ಅಂತಹವರು ಮಾಡಿದ ಸಂಶೋಧನೆಯ ಪಾಂಡಿತ್ಯಕ್ಕೂ ಇಂದಿನ ಸಂಶೋಧನೆಗೂ ಅಜಗಜಾಂತರ ವ್ಯತ್ಯಾಸವಿದೆ. ಇಂದಿನ ಪಿಎಚ್.ಡಿ. ಪದವಿಗಾಗಿ ಮಾಡುವ ಸಂಶೋಧನೆ ಕೇವಲ ನೌಕರಿಗಾಗಿಯೋ ಅಥವಾ ನೈಜವಾಗಿ ಸಾಹಿತ್ಯ ಲೋಕಕ್ಕೆ ನೀಡುವ ಪಾಂಡಿತ್ಯದ ಕೆಲಸವೋ ಎಂದು ಅವಲೋಕಿಸಬೇಕಾಗಿದೆ ಎಂದರು. ಇಂದಿನ ಸಂಶೋಧನೆ ಕಲುಷಿತವಾಗಿದೆ. ಸ್ವ ಅಧ್ಯಯನದಿಂದ ವಿಷಯಗಳ ಆಯ್ಕೆಮಾಡುವ ಬದಲು, ಮಾರ್ಗದರ್ಶಕರು ಹೇಳಿದಂತೆ ಪ್ರೌಢ ಪ್ರಬಂಧವನ್ನು ತಯಾರಿಸಿ ಪದವಿ ಪಡೆಯುವುದು ಇತ್ತೀಚಿನ ಪರಿಪಾಠವಾಗಿದೆ. ಈ ದಿಶೆಯಲ್ಲಿ ಬದಲಾವಣೆ ಪ್ರಮುಖವಾಗಬೇಕು. ಮಾರ್ಗದರ್ಶಕರೂ ಮಂಥನ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸ್ವ ಆಸಕ್ತಿಯ ವಿಷಯಗಳ ಮೇಲೆ ಮನಸ್ಸನ್ನು ಮಾಡಬೇಕು ಎನ್ನುತ್ತಾ ಇಂದಿನ ಸಂಶೋಧನೆ ಗಂಭೀರವಾಗಿಲ್ಲದ ಬಗ್ಗೆ ವ್ಯಸನ ವ್ಯಕ್ತಪಡಿಸಿದರು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ದಿನಚರಿ, ಕಾರ್ಯವೈಖರಿ, ಆಲೋಚನೆಗಳು, ಬದ್ಧತೆ, ವಿಷಯದ ಆಯ್ಕೆಯ ಗೊಂದಲ, ಆಕರ

ಸಾಮಗ್ರಿಗಳ ಸರಿಯಾದ ಬಳಕೆ ಇಂತಹ ವಿಷಯಗಳ ಬಗ್ಗೆ ಸ್ಥಿರತೆ ಇಲ್ಲದಿರುವುದು ಗಮನಾರ್ಹ. ಹಿರಿಯ ಸಂಶೋಧಕರ ಕಾರ್ಯ ವೈಖರಿಯನ್ನು ನಾವು ಅನುಸರಿಸಿದರೆ ವಿದ್ವತ್ ಪರಂಪರೆ ಮುಂದು ವರೆಯುತ್ತದೆ. ಸಂಶೋಧನೆಯ ಮೂಲ ಸರಕು ಪ್ರಾಮಾಣಿಕತೆ, ಶಿಸ್ತು, ಬದ್ಧತೆ. ವಿದ್ಯಾರ್ಥಿಗಳು ಪೂರ್ವ ವಿದ್ವಾಂಸರುಗಳಾದ ಡಿಎಲ್ಎನ್, ಗೋವಿಂದ ಪೈ, ಚಿದಾನಂದಮೂರ್ತಿ, ಕಲಬುರ್ಗಿ ಇಂತಹವರ ಮಾರ್ಗವನ್ನು ಮೊದಲು ಅಧ್ಯಯನ ಮಾಡಿ ನಂತರ ತಮ್ಮ ಸಂಶೋಧನೆಯನ್ನು ಕೈಗೊಳ್ಳಬೇಕು. ಪದವಿಗೋಸ್ಕರ ಅಡ್ಡದಾರಿ ಎಂದೂ ಹಿಡಿಯಬಾರದು. `Short cut for success, cuts short the success' ಎಂಬ ನುಡಿ ಗಮನದಲ್ಲಿರಬೇಕು. ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಉನ್ನತ ವ್ಯಾಸಂಗ ಮಾಡಲು ಉತ್ಸುಕರಾಗಿರುವ ಯುವಕರ ಆಸಕ್ತಿ ಮೆಚ್ಚುವಂತದು. ಈ ಕ್ಷೇತ್ರ ವಿಶಾಲವಾದುದು. ಅವಕಾಶಗಳು ವಿಪುಲ. ಆದರೆ ಗುಣಮಟ್ಟದ ಅಧ್ಯಯನ ಆಗಲಿ ಎಂದು ಭಿನ್ನವಿಸಿದರು.

ದಾಸ ಸಾಹಿತ್ಯದ ಬಗ್ಗೆಯೂ ವಿಚಾರಗಳನ್ನು ವ್ಯಕ್ತಪಡಿಸುತ್ತಾ, ತಮ್ಮ ಸಾಧನೆಯಲ್ಲಿ ಸಹಧರ್ಮಿಣಿಯ ಮತ್ತು ಮಗಳ ಸಹಾಯ ಹಸ್ತವನ್ನು ಸ್ಮರಿಸಲು ಮರೆಯಲಿಲ್ಲ.

**ಬಿ.ಎಂ.ಶ್ರೀ. ಕವನ ವಾಚನ**

ಕಾರ್ಯಕ್ರಮದ ನಡುವೆ ಶ್ರೀಮತಿ ಸುಮಲತಾ ಅವರು ಬಿ.ಎಂ.ಶ್ರೀ. ವಿರಚಿತ 'ಕರುಣಾಳು ಬಾ ಬೆಳಕೆ ..' ಗೀತೆಯನ್ನು ಹಾಡಿದಾಗ ಸಭಿಕರು ಕರತಾಡನ ಮಾಡಿ ಮೆಚ್ಚುಗೆ ವ್ಯಕ್ತ ಪಡಿಸಿದರು.

**ಮುಖ್ಯ ಅತಿಥಿ ಡಾ. ಪಿ.ವಿ. ನಾರಾಯಣ ನುಡಿ**

ಬಿ.ಎಂ.ಶ್ರೀ.ಪ್ರತಿಷ್ಠಾನ ಉದಯಕ್ಕೆ ಕಾರಣರಾದ ಎಂ.ವಿ.ಸೀ. ಅವರು ಪರಿಶ್ರಮ ಪಟ್ಟು, ಅದರಲ್ಲೂ ಅವರ ಆರೋಗ್ಯ ಅನುಕೂಲವಿಲ್ಲದಿದ್ದರೂ ಎದೆಗುಂದದೆ ಹಟ ಹಿಡಿದು ತಮ್ಮ ಗುರುಗಳಿಗೆ ಅಮೋಘ ಕಾಣಿಕೆ ನೀಡಿದ್ದಾರೆ. ೧೯೭೯ರಲ್ಲಿ ಇದರ ಉದ್ಘಾಟನೆಗೆ ಮೈಸೂರನ್ನು ಬಿಟ್ಟು ಅಗಲದ ಕುವೆಂಪು ಅವರ ಮನವೊಲಿಸಿ ಮತ್ತು ಅವರ ವಿಚಾರಧಾರೆಗೆ ವ್ಯತಿರಿಕ್ತವಾದ ಮಾಸ್ತಿ ಅವರನ್ನು ಕರೆತಂದು ಒಂದೇ ವೇದಿಕೆಯಲ್ಲಿ ಕೂಡಿಸಿದ್ದು, ತಮ್ಮ ತನು, ಮನ, ಧನಗಳನ್ನೆಲ್ಲಾ ಪ್ರತಿಷ್ಠಾನದ ಏಳಿಗೆಗೆ ಸಮರ್ಪಣೆ ಮಾಡಿದ್ದು ಅವಿಸ್ಮರಣೀಯ.

**ಅಸಾಧಾರಣ ವ್ಯಕ್ತಿ ಎಂ.ವಿ.ಸೀ.**

ತಮ್ಮ ಸ್ವಂತ ಮನೆಯಲ್ಲೇ ಸಂಸ್ಥೆ ಪ್ರಾರಂಭಿಸಿ, ಆಗಿನ ರಾಜಕಾರಣಿಗಳು ಮತ್ತು ಅಧಿಕಾರಿಗಳು ತಮ್ಮ ಬಗ್ಗೆ ಇಟ್ಟಿದ್ದ ಅಭಿಮಾನವನ್ನು ಸ್ವಂತಕ್ಕೆ ಬಳಸಿಕೊಳ್ಳದೆ ಪ್ರತಿಷ್ಠಾನದ ಸಲುವಾಗಿ ನಿವೇಶನವನ್ನು ಪಡೆದು, ನಂತರ ಈಗ ಇರುವ ಈ ಭವ್ಯಭವನವನ್ನು ಕಟ್ಟಿಸಿದ ಅವರ ಪರಿಶ್ರಮವನ್ನು ಕೇವಲ ಬಾಯಿಯಿಂದ ಹೇಳುವುದು ಸಾಧ್ಯವಿಲ್ಲ. ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ಪಡೆದ ಈ ಸಂಸ್ಥೆ ಈಗ ಹದಿನೈದು ವಿದ್ಯಾರ್ಥಿಗಳಿಗೆ ಪಿಎಚ್.ಡಿ. ವ್ಯಾಸಂಗಕ್ಕೆ ಮಾನ್ಯತೆ ಬಂದಿರುವುದು ಹೆಮ್ಮೆಯ ವಿಷಯ. ಈಗಿನ ಪದಾಧಿಕಾರಿಗಳು ಆಗ ಕಟ್ಟಿಸಿದ ಭವನಕ್ಕೆ ಮತ್ತಷ್ಟು ಮೆರಗು ತಂದು ಮಾಡಿರುವ ಕಾರ್ಯ ಶ್ಲಾಘನೀಯ. ಇದು ಎಂ.ವಿ.ಸೀ.ಯವರ ಪರಿಶ್ರಮಕ್ಕೆ 'ಕಲಶಪ್ರಾಯ' ಕಾರ್ಯ ಎಂದರು.

ಮುಂದುವರೆದು, 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪ್ರಶಸ್ತಿಯ'ನ್ನು ಅವರ ಮಕ್ಕಳು, ಕುಟುಂಬವರ್ಗ ಸ್ಥಾಪಿಸಿರುವುದು ಒಂದು ರೀತಿ 'ಪಿತೃ ಋಣ' ಸಂದಾಯ ಮಾಡಿದಂತೆ. ಇದು ಪ್ರೊ. ಎಂ.ವಿ.ಸೀ.ಯವರ ಹೆಸರು ಸಾಹಿತ್ಯ ಲೋಕದಲ್ಲಿ ಅಮರವಾಗಿ ಉಳಿಯುವಂತೆ ಮಾಡುತ್ತದೆ ಎಂದರು. 'ಅರ್ಚನಾ' ಪುಸ್ತಕ ಪ್ರಕಟಣೆಯ ಬಗ್ಗೆ ಅವರ ಮಗ ರಾಮಪ್ರಸಾದ್ ಮತ್ತು ಅವರ ಬಂಧು ಬಳಗದ ಶ್ರಮದ ಗುಣಗಾನ ಮಾಡಿದರು. ಹಾಗೇ ಇಂದಿನ ಸಾಹಿತ್ಯ ಪುರಸ್ಕೃತರಾದ ಪ್ರೊ. ಎ.ವಿ.ನಾವಡ ಅವರನ್ನು ಅಭಿನಂದಿಸಿದರು.

**ಸಭೆಯ ಅಧ್ಯಕ್ಷರ ನುಡಿ**

ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರು ಮಾತನಾಡುತ್ತಾ, ಪ್ರಶಸ್ತಿ ನಡೆದು ಬಂದ ಹಾದಿ ಮತ್ತು ಅದನ್ನು ಯಾವುದೇ ಅಪಸ್ವರ ಬರದಂತೆ ಪಾರದರ್ಶಕ ವಿಧಾನದಲ್ಲಿ ಆಯ್ಕೆ ಮಾಡುವ ಪರಿಪಾಠವನ್ನು ಸಭೆಯಲ್ಲಿ ಪುನರುಚ್ಚರಿಸಿದರು. ತಾವು ಅನೇಕ ಸಂದರ್ಭಗಳಲ್ಲಿ ಇಂದಿನ ಪ್ರಶಸ್ತಿ ಪುರಸ್ಕೃತರೊಂದಿಗೆ ಕಾರ್ಯನಿರ್ವಹಿಸಿದ್ದನ್ನು ನೆನಪಿಗೆ ತಂದುಕೊಂಡರು. ಪ್ರೊ. ನಾವಡ ಅವರಂತಹ ಪ್ರಬುದ್ಧ ಸಂಶೋಧಕರನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಸದಸ್ಯರಾದ ಡಾ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಪ್ರೊ. ಎಚ್.ಟಿ. ಪೋತೆಯವರನ್ನು ಅಭಿನಂದಿಸಿದರು. ಜೊತೆಗೆ ಪ್ರೊ. ನಾವಡ ಅವರ ಸಾಹಿತ್ಯ ಕೃಷಿಯಲ್ಲಿ ಮನೆಯವರ ಪಾತ್ರದ ಬಗ್ಗೆ ಬೆಳಕು ಚೆಲ್ಲಿದರು. ಇಂದಿನ ಸಂಶೋಧನೆಯ ಆಗುಹೋಗುಗಳ ಬಗ್ಗೆ ಪ್ರೊ. ನಾವಡ ಅವರ ಮಾತುಗಳನ್ನು ತಮ್ಮ ಅನಿಸಿಕೆಗಳೊಂದಿಗೆ ಬಲಗೊಳಿಸಿದರು. ಪ್ರಶಸ್ತಿಯ ಆಯ್ಕೆಯ ಬಗ್ಗೆ ಅನೇಕ ವಿಷಯಗಳನ್ನು ಚರ್ಚಿಸಿದರು. ಇದುವರೆವಿಗೂ ಹಲವು ವಿದ್ಯಾರ್ಥಿಗಳು ನಮ್ಮ ಈ ಕೇಂದ್ರದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಈ ಕೇಂದ್ರದ ಗ್ರಂಥಾಲಯದಲ್ಲಿ ಬೇರೆಲ್ಲೂ ಸಿಗದಷ್ಟು ಉತ್ತಮೋತ್ತಮ ಆಕರ ಗ್ರಂಥಗಳು ಲಭ್ಯವಿದ್ದು ಇದರ ಸದುಪಯೋಗ ವಾಗಬೇಕೆಂದು ತಿಳಿಸಿದರು. ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

**ವಂದನಾರ್ಪಣೆ**

ಕಾರ್ಯಕ್ರಮದ ನಿರೂಪಣೆ ಜವಾಬ್ದಾರಿ ಹೊತ್ತಿದ್ದ ಡಾ. ಚಂದ್ರಶೇಖರ ನಾದೂರು ಅವರ ವಂದನಾರ್ಪಣೆಯೊಂದಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮುಕ್ತಾಯವಾಯಿತು.

**ಸೆಪ್ಟೆಂಬರ್ ತಿಂಗಳ ಸಂಚಿಕೆಗೆ ತಿದ್ದುಪಡಿ**



ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಮಾದವಶಾತ್ ಉಪನ್ಯಾಸಕರಾದ ಡಾ. ಬಿ.ಟಿ. ಅನುರಾಧ ಅವರ ಚಿತ್ರದ ಬದಲು, ಬೇರೆಯವರ ಚಿತ್ರ ಅಚ್ಚಾಗಿತ್ತು. ಇದಕ್ಕೆ ಸಂಪಾದಕರು ತಮ್ಮ ವಿಷಾದ ವ್ಯಕ್ತಪಡಿಸುತ್ತಾರೆ. ಈಗ ಈ ಸಂಚಿಕೆಯಲ್ಲಿ ಡಾ. ಅನುರಾಧ ಅವರ ಉಪನ್ಯಾಸದ ಚಿತ್ರವನ್ನು ಹಾಕಿ ತಪ್ಪನ್ನು ಸರಿಪಡಿಸಿಕೊಳ್ಳಲಾಗಿದೆ.

## ಕಾರ್ಯಕಾರಿ ಸಮಿತಿಯ ಸಭೆ

ಸೆಪ್ಟೆಂಬರ್ ೨೫ ರಂದು ಪ್ರತಿಷ್ಠಾನದ ಕಾರ್ಯಕಾರಿ ಸಮಿತಿಯ ಸಭೆ ನಡೆದು, ಅನೇಕ ವಿಷಯಗಳ ಬಗ್ಗೆ ಚರ್ಚೆಯಾಯಿತು. ಈಗಿನ ಕೋಶಾಧಿಕಾರಿ ಡಾ. ಪ್ರಭಾಕರ್ ಬೆಳವಾಡಿ ಅವರ ಸ್ಥಾನದಲ್ಲಿ ಡಾ. ಚಂದ್ರಶೇಖರ ನಾದೂರು ಅವರನ್ನು ಸಭೆ ಸರ್ವಾನುಮತದಿಂದ ಆಯ್ಕೆ ಮಾಡಿತು.

# ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮ ದಿನಾಂಕ ೨೨-೦೯-೨೦೨೪ ಭಾನುವಾರ ಬೆಳಗ್ಗೆ ನಡೆಯಿತು.



ಪ್ರಾರಂಭದಲ್ಲಿ ದಿವಂಗತ ಡಾ. ಕೆ.ರಾಜೇಶ್ವರಿ ಇವರಿಗೆ ಪುಷ್ಪ ನಮನ ಸಲ್ಲಿಸಲಾಯಿತು. ನಾಡಗೀತೆ ಮತ್ತು ಪ್ರಾರ್ಥನಾ ಗೀತೆಗಳೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ವೇದಿಕೆಯ ಮೇಲೆ ಆಸೀನರಾಗಿದ್ದ ಪದ್ಮಶ್ರೀ ಡಾ. ದೊಡ್ಡರಂಗೇಗೌಡ, ಡಾ. ಭರತ್, ಉಪನ್ಯಾಸಕರಾದ ಡಾ. ಹೆಚ್.ಎಸ್.ಎಂ.ಪ್ರಕಾಶ್ ಮತ್ತು ಅಧ್ಯಕ್ಷತೆ ವಹಿಸಿದ್ದ ಡಾ.ಬೈರಮಂಗಲ ರಾಮೇಗೌಡ ಅವರನ್ನು, ಜೊತೆಗೆ ವಿಶೇಷವಾಗಿ ಆಗಮಿಸಿದ್ದ ಗಣ್ಯರನ್ನು, ಕಾರ್ಯಕಾರಿ ಸಮಿತಿಯ ಸದಸ್ಯರನ್ನು, ಸಭಿಕರನ್ನು ಮತ್ತು ಫೇಸ್ ಬುಕ್‌ನ ಪ್ರಿಯ ವೀಕ್ಷಕರನ್ನು ಆದರದಿಂದ ಸ್ವಾಗತಿಸಿ, ವೇದಿಕೆಯಲ್ಲಿದ್ದವರ ಕಿರುಪರಿಚಯ ಮಾಡಿದರು.

## ದತ್ತಿಯ ಹಿನ್ನೋಟ

ಪ್ರತಿಷ್ಠಾನದ ಸಂಸ್ಥಾಪಕರಾದ ಪ್ರೊ. ಎಂ.ವಿ.ಸೀತಾರಾಮಯ್ಯನವರು ಪ್ರೊ. ದೊಡ್ಡರಂಗೇಗೌಡರ ಗುರುಗಳು. ಪ್ರತಿಷ್ಠಾನದ ಸಾಹಿತ್ಯಿಕ ಮತ್ತು ವಿದ್ವತ್‌ವಲಯದಲ್ಲಿನ ಬೆಳವಣಿಗೆಯ ಪರಿಚಯವಿದ್ದ ಶ್ರೀ ದೊಡ್ಡರಂಗೇಗೌಡರು ತಮ್ಮ ಮಡದಿ ಡಾ.ಕೆ.ರಾಜೇಶ್ವರಿ ಗೌಡ ಅವರ ಸ್ಮರಣಾರ್ಥ ಒಂದು ದತ್ತಿನಿಧಿಯನ್ನು ಸೆಪ್ಟೆಂಬರ್ ೨೦೨೦ರಲ್ಲಿ ಸ್ಥಾಪಿಸಿದರು. ಸೃಜನಶೀಲ ಸಾಹಿತ್ಯದಲ್ಲಿ ಯಾವುದಾದರೊಂದು ಪ್ರಕಾರವನ್ನು ಅಥವಾ ಡಾ.ರಾಜೇಶ್ವರಿ ಗೌಡ ಅವರ ಹದಿನಾಲ್ಕು ಕೃತಿಗಳಲ್ಲಿ ಯಾವುದಾದರೊಂದು ಕೃತಿಯನ್ನು ಕುರಿತು ಉಪನ್ಯಾಸವನ್ನು ನಡೆಸ ಬೇಕೆಂದು ತಿಳಿಸಿದ್ದಾರೆ. ಅದರಂತೆ ಇಂದು ಇದು ದತ್ತಿನಿಧಿಯ ಐದನೇ ವರ್ಷದ ಉಪನ್ಯಾಸ ಎಂದು ಡಾ.ಶಾಂತರಾಜು ಹಿನ್ನೋಟವನ್ನು ಕೊಟ್ಟರು.

ಆದರೆ ಈ ವರ್ಷ ಸ್ವಲ್ಪ ಬದಲಾವಣೆ ಮಾಡೋಣ ಎಂದು ದಾನಿಗಳಾದ ಡಾ. ದೊಡ್ಡರಂಗೇಗೌಡ ಅವರನ್ನು ಕೇಳಿ, 'ಸಾರ್ ಎಲ್ಲರೂ ನೀವು ಕೇವಲ ಚಲನಚಿತ್ರ ಸಾಹಿತ್ಯಕ್ಕೆ ಸೀಮಿತರಾದವರು, ಎಂದುಕೊಂಡಿದ್ದಾರೆ. ಇನ್ನಿತರ ಕ್ಷೇತ್ರದಲ್ಲೂ ನಿಮ್ಮ ಬರೆವಣಿಗೆ ಇದೆ ಎಂಬ ಅರಿವು ಸಾಮಾನ್ಯ ಜನರಿಗೂ ತಿಳಿಯಲಿ' ಎಂದಾಗ, ಅವರು ಖಂಡಿತ. ನನ್ನ 'ಕಥಾಂತರಂಗ' ಬಗ್ಗೆ ಮಾಡಿ ಮತ್ತು ಇದನ್ನು English ಭಾಷೆಗೆ ಅನುವಾದ ಮಾಡಿರುವುದರಿಂದ ಡಾ.ಹೆಚ್.ಎಸ್.ಎಂ.ಪ್ರಕಾಶ್ ಅವರಿಂದಲೇ ಉಪನ್ಯಾಸ ಮಾಡಿಸಿ ಎಂದರು ಶಾಂತರಾಜು.

## ಉಪನ್ಯಾಸ



'ದೊಡ್ಡರಂಗೇಗೌಡರ ಕಥಾಂತರಂಗ' ಎಂಬ ವಿಷಯದ ಮೇಲೆ ಡಾ. ಹೆಚ್.ಎಸ್.ಎಂ. ಪ್ರಕಾಶ್ ಅವರ ಉಪನ್ಯಾಸ ಪ್ರಾರಂಭವಾಯಿತು.

ದೊಡ್ಡರಂಗೇಗೌಡರು ಎಲ್ಲರೂ ತಿಳಿದಂತೆ ಕೇವಲ ಕವಿಯಲ್ಲ. ಅವರ ರಸಭರಿತ ಕಾವ್ಯಗಳನ್ನು ಓದಿದಾಗ ಅವರು ಎಂತಹ ಶ್ರೇಷ್ಠ ಮಟ್ಟದ ಸಾಹಿತಿ ಅನ್ನುವುದು ಭಾಸವಾಗುತ್ತದೆ. ಕೊರೋನಾ ಕಾಲದಲ್ಲಂತೂ ಅವರು ತಮ್ಮ ಸೃಜನಶೀಲತೆ ಮತ್ತು ಕತೆಗಳನ್ನು ಬರೆಯುವ ದಾಹ ಬತ್ತಬಾರದೆಂದು ಅನೇಕ ಬಗೆಯ ಸಾಹಿತ್ಯ ಕೃಷಿಯನ್ನು ಮಾಡಿದ ಕ್ರಿಯಾಶೀಲ ವ್ಯಕ್ತಿ. ಅವರ ೪೮ ಕತೆಗಳ 'ಮಧ್ಯವರ್ತಿ' ಸಂಕಲನವನ್ನು ಓದಿದವರಿಗೆ ದೊಡ್ಡರಂಗೇಗೌಡರು ಹೆಸರಿಗೆ ತಕ್ಕಂತೆ ಸಾಹಿತ್ಯ ಲೋಕದಲ್ಲಿ ಅತ್ಯಂತ ದೊಡ್ಡ ಆಲದಮರವೆಂಬ ಅಂಶ ಗಮನಕ್ಕೆ ಬರುತ್ತದೆ. ಇವರ ಕೆಲವು ಪುಸ್ತಕಗಳನ್ನು ಇಂಗ್ಲಿಷ್ ಭಾಷೆಗೆ ನಾನು ಅನುವಾದ ಮಾಡುವಾಗ ಇವರ ಬರಹದ ಆಳವನ್ನು ಅರ್ಥ ಮಾಡಿಕೊಂಡೆ. ಅವರ ಬರಹದಲ್ಲಿ ಅವರ ಆತ್ಮದ ಬಿಂಬವನ್ನು ಕಂಡೆ ಎಂದರು ಪ್ರಕಾಶ್ ಅಭಿಮಾನದಿಂದ.

ಅವರ 'ಮಧ್ಯವರ್ತಿ' ಕಥಾಸಂಕಲನ ೨೦೨೨ರಲ್ಲಿ ಪ್ರಕಟವಾಯಿತು. ದೊಡ್ಡರಂಗೇಗೌಡರ ಈ ಪುಸ್ತಕದ ವಿಶೇಷತೆ ಎಂದರೆ ಇದನ್ನು ಮೆಚ್ಚಿ ಬರೆದ ಮೂರು ಮುನ್ನುಡಿಗಳು. ಅವರು ಯಾವತ್ತೂ ತಮ್ಮ ಸ್ನೇಹಿತರ ಹಾಗೂ ಅಭಿಮಾನಿಗಳ ಮಾತಿಗೆ ಗೌರವ ಕೊಡುವವರು. ಅನೇಕರು ಕಾಲ್ಪನಿಕ ಕತೆಗಳನ್ನು ಬರೆದರೆ, ದೊಡ್ಡರಂಗೇಗೌಡರ ಕತೆಗಳಲ್ಲಿ ನಾವು ಕಂಡುಕೊಳ್ಳುವುದು ಅವರಿಗೆ ಆದ ಅನುಭವದ ಅಥವಾ ಅವರಿಗೆ ಗೊತ್ತಿದ್ದ ಇನ್ನೊಬ್ಬರ ಅನುಭವದ ಆಧಾರದ ಮೇಲೆ ರಚಿತವಾದ ವಿಷಯಗಳು. ಹೀಗಾಗಿ ಇವರ 'ಮಧ್ಯವರ್ತಿ' ಓದುಗರಿಗೆ ತಮ್ಮ ಜೀವನದಲ್ಲೇ ಆದ ಘಟನೆಗಳೇನೋ ಅನ್ನಿಸಿ, ಕತೆಗಾರನನ್ನು ಮತ್ತು ಓದುಗನನ್ನು ಒಂದುಗೂಡಿಸುವ ಕ್ರಿಯೆ ಆಗುತ್ತದೆ. ಖ್ಯಾತ ವಿಮರ್ಶಕ ಈಶ್ವರ ಚಂದ್ರ ಅವರು ಇವರ ಕತೆಗಳ ಬಗ್ಗೆ ಹೇಳುತ್ತಾ, 'ದೊಡ್ಡರಂಗೇಗೌಡರ ಕತೆಗಳು ಕೇವಲ ಕತೆಗಳಲ್ಲ, ಜೀವನದ ವ್ಯಥೆಗಳು' ಎಂದು ತಮ್ಮ ಅಭಿಪ್ರಾಯ ಮತ್ತು ಅಭಿನಂದನೆಗಳನ್ನು ವ್ಯಕ್ತಪಡಿಸಿದ್ದಾರೆ.

## ಶತಮಾನದ ಕವಿ ದೊಡ್ಡರಂಗೇಗೌಡ

ವಿದ್ಯಾರ್ಥಿಯಾಗಿದ್ದಾಗಲೇ ಕತೆಗಳನ್ನು ಬರೆಯುವ ಅಭಿರುಚಿ ಹೊಂದಿದ್ದ ದೊಡ್ಡರಂಗೇಗೌಡರ ಸಾಹಿತ್ಯ ಕೃಷಿಯ ಬಗ್ಗೆ ಹಲವು ಸಾಹಿತ್ಯ ಪರಿಣಿತರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆದರೂ ಅವರ ಜನಪ್ರಿಯ ಗೀತೆ/ಕವಿತೆಗಳನ್ನು ರಚಿಸುವ ಕುಶಲತೆ ದೊಡ್ಡರಂಗೇಗೌಡರನ್ನು ಚಲನಚಿತ್ರ ಕ್ಷೇತ್ರ ಸೆಳೆದುಕೊಳ್ಳುವಂತೆ ಮಾಡಿದೆ. ಅವರ ಅನೇಕ ಕವನಗಳ ಅವಲೋಕನ ಮಾಡಿದವರು ದೊಡ್ಡರಂಗೇಗೌಡರನ್ನು 'ಶತಮಾನದ ಕವಿ' ಎಂದೇ ಕರೆದಿದ್ದಾರೆ. ಅವರ 'ಕಥಾಂತರಂಗ' ದೊಡ್ಡರಂಗೇಗೌಡರು ಒಬ್ಬ ಪ್ರಬುದ್ಧ ಕತೆಗಾರನೂ ಹೌದು ಎಂದು ನಿರೂಪಿಸಿದೆ. ಇವರಿಗೆ ಭಾರತ ಸರಕಾರ 'ಪದ್ಮಶ್ರೀ' ಪ್ರಶಸ್ತಿ ಕೊಟ್ಟು ಗೌರವಿಸಿದ್ದು ಹೆಮ್ಮೆಯ ವಿಷಯ ಎನ್ನುತ್ತಾ ತಮ್ಮ ಉಪನ್ಯಾಸವನ್ನು ಮುಗಿಸಿದರು.

## ಡಾ. ಭರತ್ ಅವರ ನುಡಿ

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಡಾ. ಭರತ್ ಅವರು ತಮ್ಮ ತಾಯಿ ಡಾ. ರಾಜೇಶ್ವರಿಯವರ ಕೆಲವು ಕವನಗಳ ನುಡಿಗಳನ್ನು ಸಭಿಕರ ಮುಂದಿಟ್ಟು ಅದರ ವಿಶ್ಲೇಷಣೆಯನ್ನು ಮಾಡಿದರು.

ಹಾಗೇ ಭಾವುಕರಾಗಿ ತಮ್ಮ ತಾಯಿಯವರು ದೊಡ್ಡರಂಗೇಗೌಡರ ಸಾಧನೆಯಲ್ಲಿ ಮತ್ತು ತಮ್ಮ ಬೆಳವಣಿಗೆಯಲ್ಲಿ ಮಾಡಿದ ಅವಿಸ್ಮರಣೀಯ ಕಾರ್ಯಗಳ ಮೇಲೆ ಬೆಳಕು ಚೆಲ್ಲಿದರು.

**ಅಧ್ಯಕ್ಷೀಯ ಭಾಷಣ**

ಅಧ್ಯಕ್ಷೀಯ ಭಾಷಣ ಮಾಡುತ್ತಾ ಡಾ. ಬೈರಮಂಗಲ ರಾಮೇಗೌಡರು ಡಿ. ಭರತ್ ಅವರು ತಮ್ಮ ತಾಯಿಯ ಬಗ್ಗೆ ಕೆಲವೇ ನಿಮಿಷಗಳಲ್ಲಿ ಆಡಿದ ಮಾತನ್ನು ಕೇಳಿ ನಾನು ಭಾವುಕನಾಗಿದ್ದೇನೆ. ತಾಯಿ ರಾಜೇಶ್ವರಿಯವರು ನಮಗೆ ಚಿರಪರಿಚಿತ ವ್ಯಕ್ತಿಯಾಗಿದ್ದವರು. ಅವರು ಹಾಗೂ ದೊಡ್ಡರಂಗೇಗೌಡರೊಂದಿಗೆ ನಾವೆಲ್ಲ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಸಂದರ್ಭದಲ್ಲಿ ಜೊತೆಗೂಡುತ್ತಿದ್ದೆವು. ರಾಜೇಶ್ವರಿ ಅವರು ದೊಡ್ಡರಂಗೇಗೌಡರನ್ನು ಪ್ರೀತಿಸಿ ಮದುವೆಯಾದ ನಂತರ ಅವರಿಬ್ಬರ ಪ್ರೀತಿ, ಪ್ರೇಮ, ಅನ್ಯೋನ್ಯತೆ ಮೆಚ್ಚುವಂತಾದ್ದು ಎಂದು ಹಿಂದಿನ ನೆನಪುಗಳನ್ನು ಮೆಲುಕು ಹಾಕಿದರು. ರಾಜೇಶ್ವರಿ ಎಲ್ಲ ವಿಧದಲ್ಲೂ ಪ್ರತಿಭಾವಂತರು ಮತ್ತು ಕ್ರಿಯಾಶೀಲರಾಗಿದ್ದರೂ ದೊಡ್ಡರಂಗೇಗೌಡರ ಶ್ರೇಯಸ್ಸಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿದ ಸಾಧ್ವಿ ಎಂದು ಇಂದಿಗೂ ಭಾವಿಸುತ್ತಾ, ತಮ್ಮ ಏಳಿಗೆಯ ಬೆನ್ನೆಲುಬೇ ಆಕೆ ಎಂಬ ಉದಾತ್ತ ಭಾವನೆಯಿಂದ ಹಲವು ವರ್ಷಗಳಿಂದ ಆಕೆಯ ನೆನಪಿನಲ್ಲಿ ನಮ್ಮ ಪ್ರತಿಷ್ಠಾನದಲ್ಲಿ ಉಪನ್ಯಾಸ ಮಾಡಿಸುತ್ತಾ, ತಾವೇ ಮುಂಚೂಣಿಯಲ್ಲಿ ನಿಂತು, ಇಂದಿಗೂ ಕಾರ್ಯತತ್ಪರರಾಗಿರುವುದು, ಅವರಿಬ್ಬರ ಆದರ್ಶ ದಾಂಪತ್ಯದ ಪ್ರತೀಕ ಎಂದು ಬಣ್ಣಿಸಿದರು.

ಚಲನಚಿತ್ರ ಕ್ಷೇತ್ರದ ದಿಗ್ಗಜ ನಿರ್ದೇಶಕರುಗಳಾದ ಸಾಯಿಪ್ರಕಾಶ್ ಮತ್ತು ಬಲರಾಮ್ ಅವರು ಉಪಸ್ಥಿತರಿದ್ದರು.

ನಿರೂಪಣೆಯ ಜವಾಬ್ದಾರಿ ಹೊತ್ತಿದ್ದ ಡಾ. ಚಂದ್ರಶೇಖರ್ ನಾದೂರು ಅವರು ವಂದನಾರ್ಪಣೆ ಮಾಡಿದರು.

## ಶಂ.ಬಾ. ಜೋಶಿ ದತ್ತಿಯ ಆಶಯ

ದಿನಾಂಕ ೨೬ ಗುರುವಾರ ಸಂಜೆ ಶಂ.ಬಾ. ಜೋಶಿಯವರ ಹೆಸರಿನಲ್ಲಿರುವ ದತ್ತಿ ಉಪನ್ಯಾಸ ನಡೆಯಿತು.

ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀಯುತ ಬಿ.ಎಸ್. ಗುರುಪ್ರಸಾದ್ ಇವರು ವೇದಿಕೆಯ ಮೇಲಿದ್ದ ಗಣ್ಯರನ್ನು, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉಪನ್ಯಾಸವನ್ನು ಕೇಳಲು ನೆರೆದಿದ್ದ ಆಸಕ್ತರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಹಾಗೇ ಇಂದಿನ ಉಪನ್ಯಾಸಕರಾದ ಲೇಖಕಿ ಮತ್ತು ಚಿಂತಕಿ ಶ್ರೀಮತಿ ಭಾರತಿ ಕಾಸರಗೋಡು, ಜೊತೆಗೆ ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರುಗಳನ್ನು ಪರಿಚಯಿಸಿದರು.

ಇದು ಈ ದತ್ತಿಯ ೨೭ನೇ ವರ್ಷದ ಕಾರ್ಯಕ್ರಮ. ಇದರ ಅಡಿಯಲ್ಲಿ ನಾಡಿನ ಹೆಸರಾಂತ ವಿದ್ವಾಂಸರು ಆಗಮಿಸಿ ಉಪನ್ಯಾಸಗಳನ್ನು ನೀಡಿರುತ್ತಾರೆ.

'ಶಂ.ಬಾ. ಜೋಶಿ ವಿಚಾರ ವೇದಿಕೆ'ಯ ಕಾರ್ಯದರ್ಶಿಗಳಾದ ಶ್ರೀ ಶಿವಲಿಂಗಯ್ಯನವರು ಪ್ರತಿಷ್ಠಾನದೊಂದಿಗೆ ೧೯೮೬ರಿಂದಲೂ ನಿಕಟ ಸಂಪರ್ಕವಿರಿಸಿಕೊಂಡು, ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲು ನೆರವು ನೀಡಿದ್ದಾರೆ. ಶಂ.ಬಾ. ಅವರ ಅಧ್ಯಕ್ಷತೆಯಲ್ಲೇ ಧಾರವಾಡದಲ್ಲಿ ಅಸ್ತಿತ್ವದಲ್ಲಿದ್ದ 'ಮಾನವಧರ್ಮ ಪ್ರತಿಷ್ಠಾನ'ವೂ ಸಹ, ದತ್ತಿ ನಿಧಿಗೆ ದೇಣಿಗೆ ನೀಡಿದೆ. ಶಂ.ಬಾ. ಅವರ ಅಭಿನಂದನಾ ಸಮಿತಿಯವರು ದತ್ತಿನಿಧಿಯ ಪ್ರಾರಂಭದಲ್ಲಿ ಮೂಲಹಣವಾಗಿ ರೂ. ೭೦೦೦ ನೀಡಿ, ದತ್ತಿನಿಧಿಯನ್ನು ಪೋಷಿಸಿದ್ದಾರೆ. ನಂತರ ಶಂ.ಬಾ. ಅವರ ಪುತ್ರಿ ಡಾ.ವಿಮಲಾ ಮತ್ತು ಪುತ್ರರಾದ ಶ್ರೀ ಮಧುಸೂದನ ಜೋಶಿಯವರು, ಶಂ.ಬಾ. ಜೋಶಿ ದತ್ತಿ ನಿಧಿಗೆ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿ, ಶಂ.ಬಾ. ಅವರ ಹೆಸರನ್ನು ಸಂಶೋಧನಾ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿ ನಿಲ್ಲಿಸಲು ಸಹಾಯ ಮಾಡಿದ್ದಾರೆ. ಸಮಾನ ಪ್ರತಿಭೆಯುಳ್ಳವರಾದ ದ.ರಾ.ಬೇಂದ್ರೆ ಮತ್ತು ಶಂ.ಬಾ. ಜೋಶಿ ಇವರಿಬ್ಬರ ಮಾತೃಭಾಷೆ ಮರಾಠಿ. ಇಬ್ಬರೂ ಧಾರವಾಡದ ಸಾಧನಕೇರಿ ನಿವಾಸಿಗಳೇ. ಭಾವನಾಜೀವಿಯಾಗಿದ್ದ ಶಂ.ಬಾ. ಅವರು ಸಂಶೋಧನಾ ಕ್ಷೇತ್ರವನ್ನು ಆಯ್ದುಕೊಂಡರೆ, ಹೆಚ್ಚು ಬೌದ್ಧಿಕರಾಗಿದ್ದ ಬೇಂದ್ರೆಯವರು ಕಾವ್ಯವನ್ನು ಆಯ್ದುಕೊಂಡರು. ವಿಚಾರವಾದಿಗಳಾದ ಶಂ.ಬಾ. ಸಂಸ್ಕೃತಿ ಅಧ್ಯಯನ, ಭಾಷಾಶಾಸ್ತ್ರ, ಪುರಾತತ್ವಶಾಸ್ತ್ರ ಅಧ್ಯಯನ, ಇತಿಹಾಸ, ಮನಃಶಾಸ್ತ್ರ, ಜೀವಶಾಸ್ತ್ರ, ಇವುಗಳ ಅಧ್ಯಯನಗಳೂ ಸಹ ಒಬ್ಬ ಸಂಶೋಧಕನಿಗೆ ಅವಶ್ಯವೆಂದು ತಮ್ಮ ಹಲವಾರು ಮೌಲಿಕ ಕೃತಿಗಳ ಮೂಲಕ ಪ್ರತಿಪಾದಿಸಿದ್ದಾರೆ. ಶಂ.ಬಾ. ಅವರ 'ಎಡೆಗಳು ಹೇಳುವ ಕಥೆಗಳು' ಕೃತಿಯು ಸ್ಥಳನಾಮ ಅಧ್ಯಯನ ಮಾಡುವ ಯುವ ಪೀಳಿಗೆಗೆ ದೀಪಿಕೆಯಾಗಿದೆ ಎಂದು ಹೇಳಿ, ದತ್ತಿ ಇತಿಹಾಸವನ್ನು ಸಭೆಗೆ ಬಿ.ಎಸ್. ಗುರುಪ್ರಸಾದ್ ಪರಿಚಯಿಸಿದರು.

ಶ್ರೀಮತಿ ಭಾರತಿ ಕಾಸರಗೋಡು ಅವರು ಒಬ್ಬ ಶ್ರೇಷ್ಠ ಲೇಖಕಿ ಹಾಗೂ ಚಿಂತಕಿ. ಇವರ ಅನೇಕ ವಿದ್ವತ್ ನುಡಿಮುತ್ತುಗಳು ಆಕಾಶವಾಣಿ ಕೇಂದ್ರದಿಂದ ಬಿತ್ತರವಾಗಿ ಅನೇಕ ಶ್ರೋತೃಗಳ ಮನಸೂರೆಗೊಂಡಿವೆ. ಇವರು ಪ್ರಕೃತಿಯ ಸೊಬಗನ್ನು, ಅದರಲ್ಲಿ ಅಡಗಿರುವ ನೈಸರ್ಗಿಕ ಸೌಂದರ್ಯವನ್ನು ಅರಗಿಸಿಕೊಂಡವರು. ಮೇಲಾಗಿ ಮಿಕ್ಕವರೂ ಆನಂದಿಸಲಿ ಎಂದು ಆ ಸೌಂದರ್ಯವನ್ನು ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದು ಪ್ರಕಟಿಸಿರುವ ಉತ್ತಮ ಛಾಯಾಗ್ರಾಹಕಿಯೂ ಹಾಗೂ ಸೌಂದರ್ಯೋಪಾಸಕಿಯೂ ಹೌದು. ಇಂದಿನ ಉಪನ್ಯಾಸಕ್ಕೆ ಹೇಳಿ ಮಾಡಿಸಿದ ವ್ಯಕ್ತಿ ಎಂದು ಬಣ್ಣಿಸಿದರು.

ಹಾಗೇ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಪ್ರತಿಷ್ಠಾನದ ಸರ್ವತೋಮುಖ ಬೆಳವಣಿಗೆಯಲ್ಲಿ ಮಾಡುತ್ತಿರುವ ಅಮೋಘ ಸೇವೆಯನ್ನು ಸೋದಾಹರಣವಾಗಿ ತಿಳಿಸಿ ಅವರ ಪರಿಚಯವನ್ನೂ ಮಾಡಿದರು.

**ಜೀವನದಲ್ಲಿ ಸೌಂದರ್ಯ**



ಶ್ರೀಮತಿ ಭಾರತಿ ಕಾಸರಗೋಡು ಅವರು ತಮಗೆ ಇಂದು ಈ ಹೆಸರಾಂತ ಪುಣ್ಯವೇದಿಕೆಯ ಮೇಲೆ ಉಪನ್ಯಾಸ ಮಾಡುವ ಸೌಭಾಗ್ಯವನ್ನು ಕರುಣಿಸಿದ ಡಾ. ಬೈರಮಂಗಲ ರಾಮೇಗೌಡ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ವಂದಿಸಿ ತಮ್ಮ ಉಪನ್ಯಾಸವನ್ನು ಪ್ರಾರಂಭಿಸಿದರು.

ಸೌಂದರ್ಯ ಎನ್ನುವುದು ನಮ್ಮೆಲ್ಲರ ನಿತ್ಯ ದಿನಚರಿಯಲ್ಲಿ ಒಂದು

ಅವಿಭಾಜ್ಯ ಅಂಗ. ನಮ್ಮ ನಮ್ಮ ಸೌಂದರ್ಯವನ್ನು ವರ್ಧಿಸಿಕೊಳ್ಳುವ ಹಾಗೂ ಪ್ರಕೃತಿಯು ನಮಗಿತ್ತಿರುವ ಸೌಂದರ್ಯವನ್ನು ಸವಿಯುವ ಸನ್ನಿವೇಶಗಳನ್ನು ಆನಂದಿಸುವುದೇ ಒಂದು ಅಪರೂಪದ ಸಂದರ್ಭ. ನಾನು ಪ್ರಕೃತಿಯ ಮಡಿಲಲ್ಲೇ ಬೆಳೆದವಳು. ಸುತ್ತಮುತ್ತಲಿನ ವಾತಾವರಣ, ನೆರೆಹೊರೆಯ ಅಂದಿನ ಜೀವನಶೈಲಿ, ಸಂಸ್ಕೃತಿ ನನ್ನನ್ನು ಆಕರ್ಷಿಸುತ್ತಿತ್ತು. ಅದರಿಂದ ಪುಳಕಿತನಾದ ನಾನು ಭಾವನಾ ಪರವಶಳಾಗಿ ಕವನಗಳನ್ನು ಬರೆಯುತ್ತಿದ್ದೆ. 'ಮನೆಯ ಮುಂದೆ ಮಳೆ, ಅದೋ ಮುತ್ತಿನ ಮಳೆ..' ಎಂದು ತಮ್ಮ ಕವನವನ್ನು ಓದಿ ಅದರಲ್ಲಿ ಅಡಗಿರುವ ಸೌಂದರ್ಯವನ್ನು ಬಣ್ಣಿಸುತ್ತಾ ಹೀಗೆ ಪ್ರಾರಂಭವಾದದ್ದು ನನ್ನ ಸಾಹಿತ್ಯ ಪಯಣ ಎಂದರು. ವಸಂತನನ್ನು ಮನ್ಮಥನ ಪರಮಾಪ್ತ ಮಿತ್ರನೆಂದು ಮಾರ್ಮಿಕವಾಗಿ ಬಣ್ಣಿಸುತ್ತಾ ಸೌಂದರ್ಯದ ಚಮತ್ಕಾರವನ್ನು ತೆರೆದು ತೋರಿಸಿದರು. ಕೋಗಿಲೆಯ ಮಾಧುರ್ಯಭರಿತ 'ಕುಹೂ ಕುಹೂ' ಕೂಗು, ತರುಣಿಯ ತುಟಿಯಂಚಿನ ನಗು, ಗುಳಿಬಿದ್ದ ಕೆನ್ನೆ, ಇವೆಲ್ಲಾ ಜೀವನದಲ್ಲಿ ನಾವು ಕಂಡು, ಉಂಡು ಆಹ್ಲಾದಿಸುವ ಕ್ಷಣಗಳಲ್ಲದೇ ಮತ್ತೇನು ಎಂದರು. ಹಾಸ್ಯದಲ್ಲೂ ಅಡಗಿರುವ ಸೌಂದರ್ಯವನ್ನು ತಮ್ಮ ಜೀವನದಲ್ಲಿ ನಡೆದ ಘಟನೆಗಳನ್ನು ಆಧರಿಸಿ ಬರೆದ ಲೇಖನದ ಭಾಗಗಳನ್ನು ಓದಿ ವಿವರಿಸಿದರು. ಅವರ ತಂದೆಯವರ ಕೆನ್ನೆಯ ಮೇಲೆ ಎದ್ದಿದ್ದ ಕೆಂಗೆಂಪು ಗುಳ್ಳೆಯನ್ನು ಅವರ ತಾಯಿ ವ್ಯಂಗ್ಯವಾಗಿ ತುಲನೆ ಮಾಡಿದಾಗ ಭಾರತಿಯವರು ತಟ್ಟನೆ ಅವರ ತಾಯಿಯ ಕೆನ್ನೆಯ ಮೇಲೆ ಬೆಳೆದಿದ್ದ ಕಪ್ಪು ಮಚ್ಚೆಯನ್ನು ತೋರಿಸುತ್ತಾ ಹಾಸ್ಯ ಮಾಡಿದ್ದರಂತೆ. ಟಾಗುರ್ ಅವರ ಲೇಖನವೊಂದನ್ನು ಉದಾಹರಿಸುತ್ತಾ ಅವರು ಮೋಕ್ಷದ ಸಂಬಂಧ ಬರೆದ ಮನಮುಟ್ಟುವ ಪದಗಳನ್ನೂ ಓದಿ ಅದರಲ್ಲಿರುವ ಕಲ್ಪನಾ ಸೌಂದರ್ಯವನ್ನು ಬಿಚ್ಚಿಟ್ಟರು.

ಈ ರೀತಿ ಇನ್ನೂ ಅನೇಕ ಬರಹಗಳ ಕೆಲವು ಅಂಶಗಳನ್ನು ತೆರೆದಿಟ್ಟು ಅವುಗಳಲ್ಲಿರುವ ಪ್ರಕೃತಿಯ, ಜೀವನದ, ಭಾವನೆಗಳ, ಬರಹದ ಶೈಲಿಯ, ಹಾಸ್ಯ ಪ್ರಸಂಗ ಮುಂತಾದ ಸಂದರ್ಭಗಳಲ್ಲಿ ಅಡಗಿರುವ ಸೌಂದರ್ಯದ ಲಕ್ಷಣಗಳನ್ನು ಸಭಿಕರ ಮುಂದೆ ಅನಾವರಣ ಮಾಡಿ, ಜೀವನದ ಎಲ್ಲಾ ಆಗುಹೋಗುಗಳಲ್ಲೂ ಸೌಂದರ್ಯ ತುಂಬಿ ತುಳುಕಾಡುತ್ತಿದೆ. ಅದನ್ನು ಸೂಕ್ಷ್ಮವಾಗಿ ಗ್ರಹಿಸಿ ಆನಂದಪಡುವ ಮನಃಸ್ಥಿತಿ ಇದ್ದವರಿಗಷ್ಟೇ ಅದು ಗೋಚರಿಸುತ್ತದೆ. 'ನಲಿವಿರಲಿ ನೋವಿರಲಿ, ಕುಂದಿರಲಿ ಕೊರತೆಯಿರಲಿ, ನೋಟದಲ್ಲಿ ನಗೆಯಿರಲಿ' ಎನ್ನುತ್ತಾ 'ಕೆಸರಿನಲ್ಲಿ ಕಮಲವಿದ್ದಂತೆ, ಕ್ರೌರ್ಯ ತುಂಬಿದ ಇಂದಿನ ಜಗತ್ತಿನಲ್ಲಿ ಸೌಂದರ್ಯವೂ ಇದೆ' ಎಂದು ಪ್ರತಿಪಾದಿಸುತ್ತಾ ತಮ್ಮ ಸೌಂದರ್ಯಭರಿತ ಉಪನ್ಯಾಸವನ್ನು ಮುಗಿಸಿದರು.

ಅಧ್ಯಕ್ಷರ ಆಶಯದಂತೆ ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ. ಜಿ.ಅಶ್ವತ್ಥನಾರಾಯಣ ಅವರು ಮಾತನಾಡಿ ತಮ್ಮ ಕೆಲವು ಅನಿಸಿಕೆಗಳನ್ನು ವ್ಯಕ್ತಪಡಿಸಿ ಶಂ.ಬಾ. ಜೋಶಿಯವರನ್ನು ಕೊಂಡಾಡುತ್ತಾ, ಇಂದಿನ ಉಪನ್ಯಾಸ ಬಹಳ ಸುಂದರವಾಗಿತ್ತು. ಶ್ರೀಮತಿ ಭಾರತಿ ಕಾಸರಗೋಡು ಅವರು ಜೀವನದಲ್ಲಿ ಸೌಂದರ್ಯದ ಬಗ್ಗೆ ವಿಚಾರಗಳನ್ನು ಅತ್ಯಂತ ಸಮರ್ಪಕವಾಗಿ ತೆರೆದಿಟ್ಟಿದ್ದಾರೆ ಎಂದರು. ಇದು ಅವರ ಜೀವನದ ಅನುಭವಗಳ ಕೈಗನ್ನಡಿ. ಇದೊಂದು ಸುಂದರವಾದ ಸಂಜೆ ಎನ್ನಿಸಿತು ಎಂದರು.

**ಅಧ್ಯಕ್ಷರ ನುಡಿ**

ಅಧ್ಯಕ್ಷೀಯ ಮಾತುಗಳನ್ನು ಆಡುತ್ತಾ, ಡಾ. ಬೈರಮಂಗಲ ರಾಮೇಗೌಡ ಅವರು, ಶ್ರೀಮತಿ ಭಾರತಿ ಕಾಸರಗೋಡು ಅವರು ಒಮ್ಮೆ ನಮ್ಮಲ್ಲಿ ಬಂದಾಗ, ಜೀವನದಲ್ಲಿ ಸೌಂದರ್ಯ ವಿಷಯದ ಮೇಲೆ ಉಪನ್ಯಾಸವನ್ನು ಮಾಡುತ್ತೀರಾ ಎಂದಾಗ ಸಂತೋಷದಿಂದ ಒಪ್ಪಿಕೊಂಡು ಬಂದು, ಇಂದು ನಮ್ಮೆಲ್ಲರನ್ನು ಉತ್ತಮವಾದ ಅಂಶಗಳನ್ನು ಒಳಗೊಂಡ ಸೌಂದರ್ಯ ಲೋಕದಲ್ಲಿ ವಿಹಾರ ಮಾಡಿಸಿದ್ದಾರೆ. ಈ ಸೌಂದರ್ಯವನ್ನು ಕಾಣುವ ಕಣ್ಣು ಬೇಕು, ಕೇಳುವ ಕಿವಿ ಬೇಕು. ಪಂಚೇಂದ್ರಿಯಗಳನ್ನು ಸಂಪೂರ್ಣವಾಗಿ ತೆರೆದಿಟ್ಟು ನಿಸರ್ಗದಲ್ಲಿ ಅಡಗಿರುವ ಸೌಂದರ್ಯವನ್ನು ಎಲ್ಲರೂ ಸವಿಯಬೇಕು ಎಂದರು. ಜೀವನ ಶ್ರೇಷ್ಠವಾಗಿರಬೇಕಾದರೆ ಸೌಂದರ್ಯವನ್ನು ಗರಿಷ್ಠ ಮಟ್ಟದಲ್ಲಿ ಸವೆಯಬೇಕು ಎಂದರು. `Beauty beholds a prepared mind' ಎಂಬ ವಿಚಾರವನ್ನು ಒತ್ತುಕೊಟ್ಟು ಹೇಳುತ್ತಾ, ಯಶಸ್ವಿಯಾಗಿ ಶಂ.ಬಾ. ಜೋಶಿಯವರ ದತ್ತಿಯನ್ನು ಸಾರ್ಥಕಗೊಳಿಸಿದ ಉಪನ್ಯಾಸಕಿ ಶ್ರೀಮತಿ ಭಾರತಿ ಕಾಸರಗೋಡು ಅವರನ್ನು ಅಭಿನಂದಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಅನಿಲ್ ಕುಮಾರ್ ಅವರ ವಂದನಾರ್ಪಣೆಯೊಂದಿಗೆ ಇಂದಿನ ಉಪನ್ಯಾಸ ಕಾರ್ಯಕ್ರಮ ಮುಕ್ತಾಯವಾಯಿತು.



## ಹಸ್ತಪ್ರತಿ ವಿಭಾಗ



ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು ಈ ಕಾಲೇಜಿನಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿರುವ ೧೪ ವಿದ್ಯಾರ್ಥಿಗಳು, ತಮ್ಮ ಅಧ್ಯಾಪಕರು/ಮುಖ್ಯಸ್ಥರೊಡಗೂಡಿ, ಪ್ರತಿಷ್ಠಾನದ 'ತಿಮ್ಮಪ್ಪದಾಸ ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯ'ಕ್ಕೆ ಶೈಕ್ಷಣಿಕ ಉದ್ದೇಶದಿಂದ ಭೇಟಿ ನೀಡಿದ್ದರು. ಈ ಕಮ್ಮಟವನ್ನು ಕನ್ನಡ ವಿಭಾಗದ ಮುಖ್ಯಸ್ಥರು ಡಾ. ಎನ್.ಆರ್. ಲಲಿತಾಂಬ ಅವರು ಆಯೋಜಿಸಿದ್ದರು. ಸಹ ಪ್ರಾಧ್ಯಾಪಕರಾದ ಡಾ. ಶೋಭಾರಾಣಿ ಎನ್., ಡಾ. ದೇವಿಕಾ ಎಸ್. ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳಿಗೆ ಪ್ರತಿಷ್ಠಾನದ ಸಂಗ್ರಹಾಲಯದಲ್ಲಿನ ವೈವಿಧ್ಯಮಯ ವಿಷಯ, ಭಾಷೆ ಮತ್ತು ಲಿಪಿಯ ಗ್ರಂಥಗಳ ಬಗ್ಗೆ ಹಾಗೂ ಹಸ್ತಪ್ರತಿ ಶಾಸ್ತ್ರ ಅಧ್ಯಯನದ ಕಾರಣಪುರುಷರಾದ ಪ್ರೊ. ಎಂ.ವಿ. ಸೀತಾರಾಮಯ್ಯನವರ ಸಾಧನೆ ಮತ್ತು ಹಸ್ತಪ್ರತಿ ಇತಿಹಾಸದ ಬಗ್ಗೆ, ಹಸ್ತಪ್ರತಿ ಸಂಯೋಜಕರಾದ ಶ್ರೀ ಬಿಎಸ್.ಗುರುಪ್ರಸಾದ್ ಅವರು power point presentation ಸಹಾಯದಿಂದ ತಾಡವೋಲೆ ಸಂರಕ್ಷಣಾ ವಿಧಾನಗಳ ಪರಿಚಯವನ್ನು ಮಾಡಿಕೊಟ್ಟರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಇತ್ತೀಚೆಗೆ ಶ್ರೀ ಕೆ.ಜಯಪ್ರಕಾಶ್ ಅವರು ನಮ್ಮ ಸಂಗ್ರಹಾಲಯಕ್ಕೆ ೨೬೪ ಪತ್ರಗಳಿರುವ ಒಂದು ಸಂಸ್ಕೃತ ಭಾಷೆಯ ನಂದಿನಾಗರಿ ಲಿಪಿಯ ಗ್ರಂಥವೊಂದನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಗ್ರಂಥದ ಸಂರಕ್ಷಣೆ ಮತ್ತು ಸೂಚಿ ಮಾಡಬೇಕಿದೆ.

ಲಿಪ್ಯಂತರದ ಸಲುವಾಗಿ ಮತ್ತು ಭಾಷಾಂತರದ ಸಲುವಾಗಿ ಮುಳಬಾಗಿಲು ಆಂಜನೇಯಸ್ವಾಮಿ ದೇವಸ್ಥಾನದ ಎರಡು ದಸ್ತಾವೇಜುಗಳನ್ನು ಶ್ರೀ ವೆಂಕಟೇಶಾಚಾರ್ ಅವರಿಂದ ಸ್ವೀಕರಿಸಿದೆ. ಈ ಕೆಲಸವೂ ಪ್ರಗತಿಯಲ್ಲಿದೆ.

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 30-09-2024

# ಪ್ರಸ್ತುತ ತಿಂಗಳ ಅಂಗಳ

**ದಿನಾಂಕ ೧೦-೧೦-೨೦೨೪ ಗುರುವಾರ**
**ಸಂಜೆ ೦೪.೦೦**
**ಹೆಬ್ಬಗೋಡಿ ಗುಂಡಪ್ಪ-ಜಾನಕಮ್ಮ ಸರಸ್ವತೀ ಪೂಜಾ ದತ್ತಿ**
ಉಪಸ್ಥಿತಿ : ದತ್ತಿ ದಾನಿಗಳಾದ ಪ್ರೊ.ಜಿ.ಅಶ್ವತ್ಥನಾರಾಯಣ, ಸಾಹಿತಿಗಳು ಕಾರ್ಯಕಾರಿ ಸಮಿತಿ ಸದಸ್ಯರು, ಕಛೇರಿ ಸಿಬ್ಬಂದಿ ವರ್ಗ ಹಾಗೂ ಇತರರು

**ದಿನಾಂಕ ೧೬-೧೦-೨೦೨೪ ಗುರುವಾರ**
**ಸಂಜೆ : ೫.೦೦**
**ಎಂ.ಎ. ರಾಮಾನುಜಯ್ಯಂಗಾರ್ ದತ್ತಿ**
ವಿಷಯ : ಎಂ.ಎ. ರಾಮಾನುಜಯ್ಯಂಗಾರ್ ಬದುಕು-ಬರಹ
ಉಪನ್ಯಾಸಕರು : ಡಾ.ಎಸ್.ಎಲ್. ಶ್ರೀನಿವಾಸಮೂರ್ತಿ
ಉಪನ್ಯಾಸಕರು, ವಿಜಯ ವಿಭಜಿತ ಪದವಿ ಪೂರ್ವ ಕಾಲೇಜು

**ದಿನಾಂಕ ೨೧-೧೦-೨೦೨೪ ಸೋಮವಾರ**
**ಸಂಜೆ : ೫.೦೦**
**ಬೇಟೆರಾಯ ದೀಕ್ಷಿತ್, ಬಿ.ರಾಮಸ್ವಾಮಿ ದತ್ತಿ, ಎಸ್.ಶ್ರೀಕಂಠಯ್ಯ, ಎಚ್.ವಿ.ಸಾವಿತ್ರಮ್ಮ ರಾಮಸ್ವಾಮಿ ದತ್ತಿ**
ವಿಷಯ : ಹರಿದಾಸರ ಕೀರ್ತನೆಗಳಲ್ಲಿ ಜೀವನ ಮೌಲ್ಯ
ಉಪನ್ಯಾಸಕರು : ಡಾ.ಎಸ್.ಎಲ್. ಮಂಜುನಾಥ್
ಪ್ರಾಂಶುಪಾಲರು, ವಿಜಯ ಸಂಜೆ ಪ.ಪೂ. ಕಾಲೇಜು

**ದಿನಾಂಕ ೨೩-೧೦-೨೦೨೪ ಬುಧವಾರ**
**ಸಂಜೆ : ೫.೦೦**
**ಶ್ರೀಮತಿ ಸುಶೀಲಾ ವಾಸುದೇವರಾವ್ ಮತ್ತು ಹಳದೀಪುರ ವಾಸುದೇವರಾವ್ ದತ್ತಿ**
ವಿಷಯ : ನವೋದಯ ಸಾಹಿತ್ಯ- ಒಂದು ಮರುನೋಟ
ಉಪನ್ಯಾಸಕರು : ಶ್ರೀ ಶತಾವಧಾನಿ ಗಣೇಶ್

**ದಿನಾಂಕ ೨೬-೧೦-೨೦೨೪ ಶನಿವಾರ**
**ಸಂಜೆ : ೪.೩೦**
**ಶಾ.ಬಾಲುರಾವ್ ಅನುವಾದ ಪ್ರಶಸ್ತಿ ಮತ್ತು ಶಾ.ಬಾಲುರಾವ್ ಯುವಬರಹಗಾರ ಪ್ರಶಸ್ತಿ ಪ್ರದಾನ ಸಮಾರಂಭ**

**ದಿನಾಂಕ ೦೨/೧೦/೨೦೨೪ರ ಬುಧವಾರ ಸಂಜೆ ೪.೦೦ ಗಂಟೆಗೆ**
**ಕರ್ನಾಟಕ ಗಮಕ ಕಲಾ ಪರಿಷತ್ತು ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನದ ಸಹಯೋಗದಲ್ಲಿ ಗಮಕ ವಾಚನ-ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ**

## ಗ್ರಂಥಾಲಯ ವಿಭಾಗ

ಕಳೆದೆರಡು ತಿಂಗಳಿನಲ್ಲಿ ಗ್ರಂಥಾಲಯವು ಒಟ್ಟು ೭೫ ಪುಸ್ತಕಗಳನ್ನು ಸ್ವೀಕರಿಸಿದೆ. ಎಲ್ಲಾ ಪುಸ್ತಕಗಳ ವರ್ಗೀಕರಣ ಮತ್ತು ದಾಖಲಾತಿ ಕಾರ್ಯಗಳು ಸಂಪೂರ್ಣಗೊಂಡಿದೆ. ಐವರು ವಿದ್ವಾಂಸರು ಮತ್ತು ಹಲವು ವಿದ್ಯಾರ್ಥಿಗಳು ಪ್ರತಿಷ್ಠಾನದ ಪರಾಮರ್ಶನ ಗ್ರಂಥಾಲಯದ ಉಪಯೋಗವನ್ನು ಇತ್ತೀಚಿಗೆ ಪಡೆದುಕೊಂಡಿದ್ದಾರೆ. ನಮ್ಮಲ್ಲಿರುವ ಅಭಿನಂದನಾ ಮತ್ತು ಸಂಸ್ಮರಣ ಗ್ರಂಥಗಳ ಪಟ್ಟಿ ಸಿದ್ಧಪಡಿಸುವ ಅವಶ್ಯಕತೆ ಇದ್ದು, ಅದರ ಪೂರ್ವ ತಯಾರಿ ಕಾರ್ಯ ಭರದಿಂದ ಸಾಗಿದೆ.

**Printed & Published by :** B.R. Ravindranath on behalf of the BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 and printed by Keerthi Printers, Girinagar, Bengaluru - 560085 & published at BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭